## 4. ವಿತ್ತೀಯ ಕಾರ್ಯಕಲಾಪಗಳು: ಬೇಡಿಕೆ ಸಂಖ್ಯೆ 7–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೇಲೆ ಮುಂದುವರೆದ ಚರ್ಚೆ

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ನಾನು ಶುಕ್ರವಾರ ಮಾತನಾಡುತ್ತಾ, ನಮ್ಮ ಗ್ರಾಮ ಪಂಚಾಯಿತಿಗಳನ್ನು strengthen ಮಾಡುವ ದೃಷ್ಟಿಯಿಂದ ಒಂದಷ್ಟು ಹೊಸ ಆಲೋಚನೆಗಳನ್ನು ಮಾಡಬೇಕೆನ್ನುವ ಮಾತನ್ನು ಹೇಳುತ್ತಿದ್ದೆ. ಈಗ ಕೇರಳ ಮಾದರಿನಲ್ಲಿ ನಮ್ಮ ಗ್ರಾಮ ಪಂಚಾಯಿತಿಗಳನ್ನು ಸಬಲೀಕರಣಗೊಳಿಸುವಂಥ ಅವಶ್ಯತೆ ಇದೆ. ಮೊನ್ನೆ ಮಾತನಾಡುತ್ತಾ ಎಷ್ಟು ಇಂಜಿನಿಯರ್ಸ್, ಪಿಡಿಒ ಕೊರತೆ ಇದೆ ಎನ್ನುವುದನ್ನೆಲ್ಲಾ ಈ ಸದನದ ಮುಂದಿಡುವಂಥ ಕೆಲಸವನ್ನು ಮಾಡಿದ್ದೆ. ಅಲ್ಲಿ ನಾವು ಗ್ರಾಮ ಪಂಚಾಯಿತಿಗಳಿಗೆ ಸಿಬ್ಬಂದಿಗಳನ್ನೇ ಕೊಡದೆ ಕಾರ್ಯ ಅನುಷ್ಠಾನ ಮಾಡುವುದಕ್ಕೆ ಹೇಗೆ ಸಾಧ್ಯ? ಅದಕ್ಕೆ ಕೇರಳ ಮಾದರಿಯಲ್ಲಿ ಪಂಚಾಯಿತಿಗಳನ್ನು ಅನುಷ್ಠಾನಗೊಳಿಸಬೇಕು. ಕೇರಳದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ಗ್ರಾಮ ಪಂಚಾಯಿತಿಯ ನಿಯಂತ್ರಣದಲ್ಲಿವೆ. 29 ಇಲಾಖೆಗಳು ಗ್ರಾಮ ಪಂಚಾಯಿತಿ ಅಡಿಯಲ್ಲಿ ಬರುತ್ತವೆ. ಅವರಲ್ಲಿ staff pattern ಹೇಗಿದೆ ಎಂದರೆ, ಗ್ರೇಡ್–1 ಪಂಚಾಯಿತಿಯಲ್ಲಿ class I Junior officer ಅಂದರೆ EO cadre ನವರು, ಜೊತೆಗೆ 11 ಜನ ಇತರೆ ಸಿಬ್ಬಂದಿ, ಗ್ರೇಡ್–2 ಪಂಚಾಯಿತಿಗಳಲ್ಲಿ ಗ್ರೂಪ್ ಬಿ ಅಧಿಕಾರಿ ಜೊತೆಗೆ 9 ಜನ ಸಿಬ್ಬಂದಿ ಇರುತ್ತಾರೆ. ನಮ್ಮ ಪಂಚಾಯಿತಿಗಳ ಸ್ಥಿತಿ ಹೇಗಿದೆ? ನಮ್ಮ ಕೆಲವು ಪಂಚಾಯಿತಿಗಳಲ್ಲಿ ಸ್ಥಿತಿ ಹೇಗಿದೆ ಎಂದರೆ, Secretary ಮತ್ತು PDOಗಳೇ ಬಾಗಿಲು ತೆರೆದು ಕಸ ಹೊಡೆಸಿ ಕುಳಿತುಕೊಳ್ಳಬೇಕಾದಂಥ ಸ್ಥಿತಿ ಇದೆ. ನಮಗೆ ನಮ್ಮ ಪಂಚಾಯಿತಿಗಳನ್ನು ನಿಜವಾಗಿಯೂ ಸಬಲೀಕರಣ ಮಾಡಬೇಕೆನ್ನುವುದಾದರೆ, ಅಧಿಕಾರದ ವಿಕೇಂದ್ರೀಕರಣ ನಿಜವಾದ ಹಂತದಲ್ಲಾಗಬೇಕಾದರೆ, ಕೇರಳ ಮಾದರಿಯಲ್ಲಿ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 29 ಇಲಾಖೆಗಳು ಬರುವುದನ್ನು ಸ್ಪಡಿ ಮಾಡಿ, ಕೇರಳ ಮಾದರಿಯನ್ನು ಕರ್ನಾಟಕದಲ್ಲಿ ಅಳವಡಿಸಿಕೊಳ್ಳುವುದರ ಕಡೆಗೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು, ಯೋಚಿಸಬೇಕಾದ, ಚಿಂತಿಸಬೇಕಾದ ಅವಶ್ಯಕತೆ ಇದೆ. ನಮ್ಮಲ್ಲಿ

ಬಜೆಟ್ ಸೈಜ್, ನಮ್ಮದು ಏಳು ಪೈಸೆ ಅಂದರೆ 7% ಹಣವನ್ನು ಗ್ರಾಮೀಣಾಭಿವೃದ್ಧಿಗೆ ಕೊಡುತ್ತೇವೆ, ಅಲ್ಲಿ 33% ಹಣವನ್ನು ಗ್ರಾಮೀಣಾಭಿವೃದ್ಧಿಗೆ ಕೊಡುತ್ತಾರೆ. ಕೇರಳದಲ್ಲಿ ಬಜೆಟ್ ಸೈಜ್ ನಲ್ಲಿ 33% ಹಣವನ್ನು ಗ್ರಾಮೀಣಾಭಿವೃದ್ಧಿಗೆ ತೆಗೆದಿಡುತ್ತಾರೆ, ಇಲ್ಲಿ ನಾವು ತೆಗೆದಿಡುವುದು 7% ಮಾತ್ರ. ನಮಗೆ ಹಳ್ಳಿಗಳಿಂದಲೇ ದೇಶದ ಉದ್ಧಾರ, ಇವೆಲ್ಲಾ ನಿಜವಾಗಬೇಕಾದರೆ ಹಳ್ಳಿಗಳನ್ನು ಶಕ್ತಿಶಾಲಿಯನ್ನಾಗಿ ಮಾಡುವುದರ ಕಡೆಗೆ ಯೋಚಿಸಬೇಕಾದ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ಒಂದಿಷ್ಟು ವಿಶೇಷವಾದ ಪ್ಲಾನ್‌ಅನ್ನು ಮಾಡಬೇಕಾಗುತ್ತದೆ. ಇನ್ನು ಕೇರಳ ಮಾದರಿಯಲ್ಲಿ ಯೋಜನಾ ಪ್ರಕ್ರಿಯೆ ನಮ್ಮಲ್ಲಿ ಹೇಗೆ ವಾರ್ಡ್ ಸಭೆ, ಗ್ರಾಮಸಭೆಗಳಾಗುತ್ತದೆಯೋ ಅದೇ ರೀತಿಯಲ್ಲಿ ಎಲ್ಲಾ ಇಲಾಖೆಗಳನ್ನು ಒಗ್ಗೂಡಿಸಿಕೊಂಡು Development Seminar ಗಳನ್ನು ಮಾಡಿ ಕ್ರಿಯಾ ಯೋಜನೆಗಳನ್ನು ತಯಾರಿಸಿ ಡಿಪಿಸಿ ಅಂದರೆ ಜಿಲ್ಲಾ ಯೋಜನಾ ಸಮಿತಿಗೆ ಕಳುಹಿಸುತ್ತಾರೆ, ನಂತರ ರಾಜ್ಯ ಸರ್ಕಾರಕ್ಕೆ ಕ್ರಿಯಾ ಯೋಜನೆ ಹೋಗುತ್ತದೆ. ನಮ್ಮಲ್ಲಿ ಏನಾಗುತ್ತದೆ ಎಂದರೆ Head of Accountನಲ್ಲಿ ಇಂಥ Headಗೆ ಖರ್ಚು ಮಾಡಬೇಕೆಂದು ಇಲ್ಲಿಂದ ಆದೇಶವಾಗಿ ಕೆಳಗಡೆಗೆ ಬರುತ್ತದೆ. ಅದು ಉಪಯೋಗವಿದೆಯೋ ಇಲ್ಲವೋ, ಅಂಗನವಾಡಿಗಳಿಗೆ ಪರಿಕರಗಳನ್ನು ಕೊಂಡುಕೊಳ್ಳಲು ಇಷ್ಟು ಅನುದಾನ, ಕುರಿ, ಎಮ್ಮೆ, ಕೋಳಿ ಸಾಕಾಗಣಿಕೆಗೆ ಒಂದು ಯುನಿಟ್ ಎಂದು ಇಲ್ಲಿಂದ ಅನುದಾನವನ್ನು ಫಿಕ್ಸ್ ಮಾಡಿ ಪಂಚಾಯಿತಿಗಳಿಗೆ ಕಳುಹಿಸುವ ಬದಲಿಗೆ ಪಂಚಾಯಿತಿ ಮಟ್ಟದಲ್ಲಿ ಅವರು ಯೋಜನೆಗಳನ್ನು ತಯಾರು ಅವರಿಗೆ ಬೇಕಾದ ಯೋಜನೆಗಳನ್ನು ರೂಪಿಸಿಕೊಳ್ಳುವುದಕ್ಕೆ, ಅನುಷ್ಠಾನಗೊಳಿಸುವುದಕ್ಕೆ ಅವರಿಗೆ ಸ್ವಾಯತ್ತತೆಯನ್ನು ಪೂರ್ಣಪ್ರಮಾಣದಲ್ಲಿ ಕೊಡುವಂತಾಗಬೇಕು. ಅದು ಕೊಡುವಂತಾದಾಗ ಮಾತ್ರ ನಿಜವಾದ ಅರ್ಥದಲ್ಲಿ ಪಂಚಾಯಿತಿಗಳ ಸಬಲೀಕರಣವಾಗುತ್ತದೆ, ಇಲ್ಲದಿದ್ದರೆ ಅದು ಪುಸ್ತಕದಲ್ಲಿನ ಬದನೆಕಾಯಿಯಾಗಿ ಯುಳಿಯುತ್ತದೆ. ಪುಸ್ತಕದ ಬದನೆಕಾಯಿ ಸಾರು ಮಾಡುವುದಕ್ಕೆ ಬರುವುದಿಲ್ಲ, ಬರೀ ತೋರಿಸಬಹುದು, ಹಾಗೆ ಆಗಬಾರದೆಂದರೆ, ಕೇರಳ ಮಾದರಿ ಬಗ್ಗೆ ಸ್ಟಡಿ ಮಾಡಬೇಕಾದಂಥ ಅವಶ್ಯಕತೆ ಇದೆ. ಅದು ನಮಗಿಂತಲೂ

ಉತ್ತಮವಾಗಿದೆ ಎನ್ನುವ ಅಭಿಪ್ರಾಯ ನಮ್ಮ ಕೆಲವು ಸ್ನೇಹಿತರಿಂದ ಬಂದಿದೆ. ನನಗೆ ಯಾವುದು ಬೆಟರ್ ಇದೆ ಎಂದು ಒಂದಿಷ್ಟು ಅಧ್ಯಯನ ಮಾಡಬೇಕೆಂದಾಗ ಕೇರಳ ಮಾದರಿಯ ಸಲಹೆಯನ್ನು ಕೊಟ್ಟಿದ್ದಾರೆ. ಹೆಚ್.ಕೆ. ಪಾಟೀಲರು ತಾವು ಅಧ್ಯಯನಶೀಲರೂ ಇದ್ದೀರಿ, ಪ್ರಯತ್ನಶೀಲರೂ ಇದ್ದೀರಿ ಈ ನಿಟ್ಟಿನಲ್ಲಿ ಒಂದಿಷ್ಟು ಯೋಚಿಸಬೇಕಾದಂಥ ಅವಶ್ಯಕತೆ ಇದೆ. ಇನ್ನು ನಾವು ಗ್ರಾಮ ಪಂಚಾಯಿತಿಗಳಿಗೆ ಸಿಬ್ಬಂದಿ ನೇಮಕ ಮಾಡುವುದರ ಜೊತೆಗೆ work follow up management ಬಗ್ಗೆ ಕೂಡ ಯೋಚಿಸಬೇಕು. ನಾವು ಇಲ್ಲಿ ಯೋಜನೆಯನ್ನು ಘೋಷಣೆ ಮಾಡುತ್ತೇವೆ, ಅದರ implementation ಬಗ್ಗೆ, ಕಾಲಮಿತಿಯೊಳಗೆ ಯೋಜನೆ ಅನುಷ್ಠಾನವಾಗುವುದರ ಕಡೆಗೆ ನಾವು Monitoring system ಅನ್ನು ಚುರುಕುಗೊಳಿಸಬೇಕಾದಂಥ ಅವಶ್ಯಕತೆ ಇದೆ. ಈಗ on line systemಅನ್ನು ಪಂಚಾಯಿತಿಗಳಿಗೆ ಮಾಡಲಾಗಿದೆ, ಅದನ್ನು ಮಾಡಿದ್ದರೂ ಕೂಡ ಎಲ್ಲಾ ಗ್ರಾಮ ಪಂಚಾಯಿತಿಗಳು 100% on line ಆಗಿದ್ದಾವಾ ಎನ್ನುವುದು question mark. ಇನ್ನೂ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ internet problem, ವಿದ್ಯುತ್ ಸಮಸ್ಯೆ, ಇತ್ಯಾದಿಗಳಿಂದ ಕೆಲಸ ಸುಲಭವಾಗಿ, ಸುಗಮವಾಗಿ ಆಗುತ್ತಿಲ್ಲ ಈ ಕೊರತೆ ಬಾಧಿಸದಿರುವ ರೀತಿಯಲ್ಲಿ ಒಂದಿಷ್ಟು ಯೋಚನೆ ಮಾಡಬೇಕು. ಇನ್ನು ನಮ್ಮ ವಿಕೇಂದ್ರೀಕರಣ ವ್ಯವಸ್ಥೆಗೆ ಶಾಪವಾಗಿ ಕಾಡುತ್ತಿರುವುದು, ಅನ್ಯ ಇಲಾಖೆಗಳಿಂದ ನಿಯೋಜನೆ ಮೇಲೆ ಬಂದು ಕರ್ತವ್ಯ ನಿರ್ವಹಿಸುತ್ತಿರುವಂಥರಿರುವುದು ಅದೊಂದು ರೀತಿ ಶಾಪವಾಗಿ ಕಾಡುತ್ತಿದೆ. ಮೊನ್ನೆ ಹೇಳುತ್ತಿದ್ದೆ, ಒಂದು shelter ಮಾಡಿಕೊಳ್ಳುತ್ತಾರೆ, ಬಡ್ತಿಗೆ ಬರುತ್ತಾರೆ, ಇಲ್ಲಿ ಗುಡಿಸಿ ಹೋಗಿಬಿಡುತ್ತಾರೆ, ಹಾಗೆ ಆಗಬಾರದು. ಉತ್ತಮವಾಗಿ ಕೆಲಸ ಮಾಡಿರುವ, ಪರ್ಸೆಂಟೇಜ್ ಬಹಳ ಕಡಿಮೆ. ಬೇಕಾದರೆ ನೀವು ಒಂದು ಸ್ಟಡಿ ಟೀಂ ಕಳುಹಿಸಿ, ಬೇರೆ ಬೇರೆ ಇಲಾಖೆಗಳಿಂದ ಬಂದವರು ಮಾಡಿರುವ ಅವಾಂತರಗಳನ್ನು ನೋಡಿ, ಅದನ್ನು ನೋಡಿ ಗ್ರಾಮೀಣಾಭಿವೃದ್ಧಿ ಇಲಾಖೆಗೆನೇ ಪ್ರತಿ ಹಂತದಲ್ಲೂ ನಾವು ಕೆಲಸಕ್ಕೆ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕು. ನಾನು ನಿಮಗೆ ಒಂದು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ, ನೀವು ಗ್ರಾಮೀಣ

ವಿಶ್ವವಿದ್ಯಾಲಯದ ಪ್ರಸ್ತಾಪವನ್ನು ಮಾಡಿದ್ದೀರಿ. ಅದನ್ನು ಪ್ರಸ್ತಾಪ ಮಾಡಿ 2013ರ ಡಿಸೆಂಬರ್‌ನಲ್ಲೇ ಒಂದು ಕಮಿಟಿಯನ್ನು ರಚನೆ ಮಾಡಿ 2 ತಿಂಗಳಲ್ಲಿ ವರದಿ ಕೊಡಬೇಕೆಂದು ಹೇಳಿದಿರಿ. ಆದರೆ ನಾನು ಪತ್ರಿಕೆಯಲ್ಲಿ ಓದಿದ್ದು, ಅವರಿಗೆ ಆದೇಶ ತಲುಪಬೇಕಾದರೇ 4 ತಿಂಗಳು ಕಳೆದು ಹೋಗಿತ್ತಂತೆ. ಅಂದರೆ ಒಂದು ಸರ್ಕಾರಿ ಆದೇಶ ಕಮಿಟಿಯ ಸದಸ್ಯರಿಗೆ ತಲುಪಬೇಕಾದರೆ 4 ತಿಂಗಳಾಗಿಬಿಟ್ಟರೆ ಇನ್ನು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕಾದ ಇಲಾಖೆ ಅಲ್ಲೇ ವಿಳಂಬವಾಯಿತು. ನಿಮ್ಮ ಲೆಕ್ಕದಲ್ಲಿ 2 ತಿಂಗಳೆಂದರೆ ಫೆಬ್ರವರಿ ಒಳಗಡೆ ಕಮಿಟಿ ರಿಪೋರ್ಟ್ ಬರಬೇಕಾಗಿತ್ತು. ಈಗ ಜೂನ್ ತಿಂಗಳ ಕೊನೆಯದಿನದಲ್ಲಿದ್ದೇವೆ, ಕನಿಷ್ಠ ಜೂಲೈನಲ್ಲಾದರೂ ಆ ಕಮಿಟಿಯ ರಿಪೋರ್ಟ್ ಪಡೆದು, ಆ ಗ್ರಾಮೀಣ ವಿಶ್ವವಿದ್ಯಾಲಯವನ್ನು ನೀವು ಅನುಷ್ಠಾನಕ್ಕೆ ತರುವಂತಾಗಬೇಕು. ನನಗೆ, ಅಲ್ಲಿ ಬರೀ ಸಂಶೋಧನೆಯ ಜೊತೆಗೆ ಗ್ರಾಮೀಣ ಕೌಶಲ್ಯ ಹೆಚ್ಚು ಮಾಡುವ ದೃಷ್ಟಿಯಿಂದ, ಬರೀ ಆಡಳಿತ ದೃಷ್ಟಿಯಿಂದಲ್ಲ, ಗ್ರಾಮೀಣ ಜನರನ್ನು ಸ್ವಾಲಂಬಿಯನ್ನಾಗಿ ಮಾಡುವ ದೃಷ್ಟಿಯಿಂದ ಆರ್ಥಿಕ ಯೋಜನೆಗಳನ್ನು ರೂಪಿಸಬೇಕು. ನಾವು ಬಹಳ ದುಃಖದಿಂದ ಹೇಳಬೇಕಾಗುತ್ತದೆ, ಇಷ್ಟೆಲ್ಲಾ ಆದ್ಯತೆಗಳನ್ನು ಸಂವಿಧಾನದಲ್ಲಿ ದಲಿತವರ್ಗಕ್ಕೆ ಕೊಟ್ಟ ನಂತರವೂ ಕೂಡ ಇವತ್ತಿಗೂ ಗ್ರಾಮೀಣ ಪ್ರದೇಶದಲ್ಲಿ untouchability ಇದೆ, ಗ್ರಾಮಾಂತರ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಅಸ್ಪೃಶ್ಯತೆ ಇದೆ. ಆ ಅಸ್ಪೃಶ್ಯತೆಯನ್ನು ನಾವು ಸಾರ್ವಜನಿಕ ಸ್ಥಳಗಳಿಗೆ ಮಾತ್ರ ಸೀಮಿತ ಮಾಡಿದ್ದೇವೆ, ಆದರೆ ಇನ್ನೂ ಮನ ಮತ್ತು ಮನೆ ಬದಲಾಗಿಲ್ಲ. ಈ ಅಸ್ಪೃಶ್ಯತೆ ಆಚರಣೆ ಮಾಡುವವರ ಮನಸ್ಸು ಬದಲಾಗಿಲ್ಲ, ಅವರ ಮನೆಯೂ ಬದಲಾಗಿಲ್ಲ. ಕೇವಲ ಶಾಸನದ ಭಯದ ಕಾರಣಕ್ಕೆ ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ಅಸ್ಪೃಶ್ಯತೆ ಕಡಿಮೆಯಾಗಿದೆಯೇ ಹೊರತು ಇನ್ನು ಆಗಾಗ ಪತ್ರಿಕೆಗಳಲ್ಲಿ ಬರುವ ವರದಿಗಳು, ಮಾನವ ಸಮಾಜಕ್ಕೆ ಗೌರವ ತರುವಂಥ ವರದಿಗಳು ಬರುವುದಿಲ್ಲ, ನಾಗರೀಕ ಸಮಾಜ ಒಪ್ಪಿಕೊಳ್ಳುವಂಥ ವರದಿಗಳು ಬರುವುದಿಲ್ಲ. ದಲಿತರಿಗೆ ಕ್ಷೌರಿಕ ಅಂಗಡಿಯಲ್ಲಿ ಕ್ಷೌರನೇ ಮಾಡುವುದಿಲ್ಲವೆಂದು ಹೇಳುವುದು, ಅವರಿಗೆ ಬಹಿಷ್ಕಾರ ಹಾಕುವಂಥ ಪ್ರಕರಣಗಳು ಇವತ್ತಿಗೂ ಬರುತ್ತಿರುವುದು.

ಸ್ವಾತಂತ್ರ್ಯ ಬಂದು 66–67 ವರ್ಷಗಳ ನಂತರವೂ ಕೂಡ ಅಸ್ಪೃಶ್ಯತೆ ಜೀವಂತರಾಗಿರುವುದು, ಗ್ರಾಮಾಂತರ ಪ್ರದೇಶದಲ್ಲಿ ಅದು ಇನ್ನೂ ಜೀವಂತವಾಗಿರುವುದು, ಇನ್ನೂ ದೇವಾಲಯಗಳಿಗೆ ಪ್ರವೇಶ ಕೊಡದಿರುವ ಸ್ಥಿತಿ ನಿರ್ಮಾಣವಾಗಿರುವುದು, ಯಾವ ಹಂತದಲ್ಲಿ ಅಸ್ಪೃಶ್ಯತೆ ನಿವಾರಣೆಯಾಗಬೇಕಾಗಿತ್ತೋ, ಆ ಹಂತದಲ್ಲಿ ನಿವಾರಣೆಯಾಗಿಲ್ಲವೆನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಆರ್. ಪಾಟೀಲ್:–** ಮಾನ್ಯ ಅಧ್ಯಕ್ಷರೆ, ಸಿ.ಟಿ. ರವಿಯವರು ಮಂತ್ರಿಯಾಗಿದ್ದವರು, ಮಾತನಾಡಲಿ ಗ್ರಾಮೀಣಾಭಿವೃದ್ಧಿಯ ವಿಷಯದ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದರೆ ಒಳ್ಳೆಯದು. ಸಮಾಜ ಕಲ್ಯಾಣ ವಿಷಯ ಬಂದಾಗ ಇದರ ಬಗ್ಗೆ ಇನ್ನೂ ಸುದೀರ್ಘವಾಗಿ ಮಾತನಾಡೋಣ.

**ಶ್ರೀ ಸಿ.ಟಿ. ರವಿ:–** ಪಾಟೀಲರೆ, ನೀವು ನನ್ನನ್ನು ಅರ್ಥ ಮಾಡಿಕೊಂಡಿಲ್ಲ. ಗ್ರಾಮೀಣಾಭಿವೃದ್ಧಿ ಎಂದರೆ ಕೇವಲ ಕಟ್ಟಡ ಕಟ್ಟುವುದಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಎಲ್ಲಾ ವರ್ಗದ ಜನ ಅಭಿವೃದ್ಧಿಯಾಗುವ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ಗ್ರಾಮನೇ ಒಂದು ಯೂನಿಟ್. ನೀವು ಮನಸ್ಸು ಕಟ್ಟದೆ ದೇಶ ಕಟ್ಟುವುದಕ್ಕೆ ಸಾಧ್ಯವಿಲ್ಲ. ಮೊದಲು ಮನಸ್ಸು ಕಟ್ಟಬೇಕು. ಮನಸ್ಸು ತಟ್ಟತಕ್ಕಂತಹ ಯೋಜನೆ ಇಲ್ಲದೇ ಜನರ ಸಹಭಾಗಿತ್ವ ಇಲ್ಲದೇ ದೂರ ಆಗಿರುವುದು. ಈ ರೀತಿಯಲ್ಲಿ ಗ್ರಾಮೀಣ ವಿಶ್ವವಿದ್ಯಾಲಯ ಜನರ ಮನಸ್ಸನ್ನು ತಟ್ಟುವಂತಹ ಒಂದು ವಿಶ್ವವಿದ್ಯಾಲಯ ಆಗಬೇಕು. ನಾನು ನಿಮಗೆ ಅದನ್ನೇ ಹೇಳುವುದಕ್ಕೆ ಹೊರಟ್ಟಿದ್ದೆ. ನೀವು ಕೇಳುವುದಕ್ಕೆ ಆಗಲಿಲ್ಲ. ನಿಮ್ಮ ಭಾಗದಲ್ಲಿ ಅಸ್ಪೃಶ್ಯಕತೆ ಬಹಳ ಇದೆಯೇನು?

**ಶ್ರೀ ಬಿ.ಆರ್. ಪಾಟೀಲ್:–** ಏಕೆ ನಿಮ್ಮ ಭಾಗದಲ್ಲಿ ಕಡಿಮೆ ಇದೆಯೇನು?

**ಶ್ರೀ ಸಿ.ಟಿ. ರವಿ:–** ನಮ್ಮ ಭಾಗದಲ್ಲಿ ಕಡಿಮೆ ಇದೆ. 100% ಕಡಿಮೆ ಇದೆ.

**ಶ್ರೀ ಬಿ.ಆರ್. ಪಾಟೀಲ್:–** ದೇಶದ ಕೊಡ್ಡ ಕಳಂಕ ಅಸ್ಪೃಶ್ಯತೆ ಇವತ್ತೂ ದೇಶದಲ್ಲಿದೆ. ಏಕೆ ಸುಮ್ಮನೆ ಮುಚ್ಚಿಡಬೇಕು ಅದೆಲ್ಲಾ? ಎಲ್ಲಾ ಕಡೆ ಇದೆ.

**ಶ್ರೀ ಸಿ.ಟಿ. ರವಿ:–** When compared to your district ಬಹಳ ಕಡಿಮೆ ಇದೆ.

**ಶ್ರೀ ಹೆಚ್.ಕೆ. ಪಾಟೀಲ್:–** Feudal system ಎಲ್ಲೆಲ್ಲಿ ಇದೆ ಅಲ್ಲಿ ಸಹಜವಾಗಿ ಅಸ್ಪೃಶ್ಯತೆ ಜಾಸ್ತಿ ಇದ್ದೇ ಇರುತ್ತದೆ. ಇದನ್ನು ಕಡಿಮೆಗೊಳಿಸುವಂತಹ ಬಹಳಷ್ಟು ಪ್ರಯತ್ನ ಇನ್ನೂ ಆಗಬೇಕು. ಅದರ ಜೊತೆಗೆ ಮಾನ್ಯ ಬಿ.ಆರ್. ಪಾಟೀಲರು ಇದಕ್ಕೆ ಏನು ಸಂಬಂಧ ಎಂದು ಪ್ರಶ್ನೆ ಮಾಡಿದರು. ಒಂದು ರೀತಿ ಗ್ರಾಮೀಣಾಭಿವೃದ್ಧಿ ಎಂದರೆ ನಾವು ಬರೀ ಮೂಲಭೂತ ಸೌಕರ್ಯಗಳಿಗೆ ಮಾತ್ರ ಲಿಮಿಟ್ ಮಾಡಿಕೊಳ್ಳುತ್ತಿದ್ದೇವೆ.

**ಶ್ರೀ ಬಿ.ಆರ್. ಪಾಟೀಲ್:–** ಇದು ಬಹಳ ಮುಖ್ಯವಾದ ವಿಷಯ. ನಾನು ಇದಕ್ಕೆ ವಿರೋಧ ಮಾಡುತ್ತಿಲ್ಲ.

**ಶ್ರೀ ಸಿ.ಟಿ. ರವಿ:–** ಒಂದು ಗ್ರಾಮದ ಸಮಗ್ರ ಅಭಿವೃದ್ಧಿ ಎಂದರೆ, ಕೇವಲ ಮೂಲ ಸೌಕರ್ಯಗಳನ್ನು ಸರ್ಕಾರ ಅಭಿವೃದ್ಧಿ ಪಡಿಸುವುದಲ್ಲ, ಜನರ ಮನಸ್ಸನ್ನು ಜೋಡಿಸತಕ್ಕಂತಹ ಕೆಲಸ ಆಗಬೇಕು. ನಿಮಗೆ ಗೊತ್ತಿರಲಿ ಅರಣ್ಯ ಇಲಾಖೆ ಇಲ್ಲದೇ ಇರತಕ್ಕಂತಹ ಕಾಲದಲ್ಲಿ ನಮ್ಮ ದೇಶದಲ್ಲಿ ಅರಣ್ಯಗಳು ವಿಫಲವಾಗಿದ್ದವು. ಏಕೆಂದರೆ, ಜನರ ಸಹಭಾಗಿತ್ವ ಇತ್ತು. ದೇವರ ಕಾಡು ಆಗ ಯಾವ ಶಾಸನ ಇತ್ತು? ಆದರೆ ಜನರ ನಿರ್ಬಂಧ ಇತ್ತು.

**ಶ್ರೀ ಜೆ.ಟಿ. ಪಾಟೀಲ್:–** ದಯಮಾಡಿ ನಿಮ್ಮ ಪಕ್ಷದಲ್ಲಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಿ.

**ಶ್ರೀ ಸಿ.ಟಿ. ರವಿ:–** ಈಗ ಮೊದಲ ಪರಮೇಶ್ವರ್‌ರವರಿಗೆ ನ್ಯಾಯ ಕೊಡಿ. ಆ ಮೇಲೆ ಮಾನ್ಯ ಕಾರಜೋಳರವರಿಗೆ ನ್ಯಾಯ ಕೊಡಿಸುವಿರಂತೆ. ಈಗ ಇವೆಲ್ಲಾ ಇರಲಿ. ನೀವು ಇದೆಲ್ಲವನ್ನೂ ಮೀರಿದವರು. ಜಾತ್ಯಾತೀತರು ಹಾಗಾಗಿ ಮೊದಲು ಪರಮೇಶ್ವರ್‌ರವರಿಗೆ ನ್ಯಾಯ ಕೊಡಿ. ಆ ಮೇಲೆ

ಗೋವಿಂದ ಕಾರಜೋಳರವರದ್ದು ಹೇಳಿ. ನಿಮ್ಮ ಪಕ್ಷದಲ್ಲಿದ್ದಾಗ ಗೋವಿಂದ ಕಾರಜೋಳರವರು ಸೋತರು. ನಮ್ಮ ಪಕ್ಷಕ್ಕೆ ಬಂದಾಗ ನಾವು ಗೆಲ್ಲಿಸಿದ್ದೇವೆ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ರವಿ ಆವರೇ, ಈ ರೀತಿ ಚರ್ಚೆ ಮಾಡುವುದಾದರೆ ನೀವು ಬಹಳ ಹಿಂದೆ ಬೀಳುತ್ತೀರಿ.

**ಶ್ರೀ ಸಿ.ಟಿ. ರವಿ:–** ಸುಧಾರಣೆ ಪ್ರಕ್ರಿಯೆ ನಾನು ಮೊದಲೇ ಹೇಳಿದೆ. ಮನಸ್ಸಿನಲ್ಲಿ ಚರ್ಚೆಯಾಗಬೇಕು, ಮನೆಯೊಳಗೆ ಬದಲಾವಣೆಯಾಗಬೇಕು, ಪಕ್ಷಗಳಲ್ಲಿಯೂ ಬದಲಾವಣೆಯಾಗಬೇಕು. ಅದು ಯಾವುದೇ ಪಕ್ಷಕ್ಕೆ ಕಾಡದೇ ಬಿಟ್ಟಿರುವಂಥದ್ದು ಅಲ್ಲ. ಸುಧಾರಣಾ ಪ್ರಕ್ರಿಯೆ ಎಲ್ಲಾ ಕಡೆಯಿಂದಲೂ ಆಗಬೇಕು. ಗ್ರಾಮಗಳಲ್ಲಿಯೂ ಆಗಬೇಕು. ನಾನು ಹೇಳಿದ್ದು ಒಂದು ಗ್ರಾಮದ ಒಂದು ಯೂನಿಟ್ ಎಂದರೆ, ಈ ರೀತಿ ಮನಸ್ಸು ತಟ್ಟುವಂತಹ ಕೆಲಸ ಆಗಬೇಕು. ಏಕೆ ಮನಸ್ಸು ತಟ್ಟಬೇಕೆಂದರೆ ನಾವು ಜಲಾನಯನಕ್ಕೆ ಸಾವಿರಾರು ಕೋಟಿ ವಿನಿಯೋಗಿಸಿದ್ದೇವೆ. ಡಾ॥ ರಾಜೇಂದ್ರ ಸಿಂಗ್ ಮಾಡಿದ ಒಂದು ಕೆಲಸ ನಮ್ಮ ಇಲಾಖೆ ಮಾಡುವುದಕ್ಕಾಗಿದೆಯೇ? ಸಾವಿರಾರು ಕೋಟಿ ಹಣ ವಿನಿಯೋಗಿಸಿದ ನಂತರವೂ ಕೂಡ ಇಂತಹ ಬತ್ತು ಹೋದ ನದಿಯನ್ನು ಈ ಜಲಾನಯನ ಯೋಜನೆಯ ಮೂಲಕ ಪುನರುಜ್ಜೀವನಗೊಳಿಸಿದ್ದೇವೆಂದು ಬೆನ್ನು ತಟ್ಟಿಕೊಂಡು ಹೇಳುವಂತಹ ವರದಿ ನಮ್ಮ ಬಳಿ ಇದೆಯೇ? ಏಕೆಂದರೆ, ನಾವು ಡ್ಯಾಂ ಕಟ್ಟಿದ್ದೇವೆ, ಮನಸ್ಸು ಕಟ್ಟಲಿಲ್ಲ. ಅಲ್ಲಿ ಡ್ಯಾಂ ಜೊತೆ ಮನಸ್ಸನ್ನೂ ತಟ್ಟಿದ್ದರು. ಅದಕ್ಕಾಗಿ ನಾನು ಹೇಳಿದೆ ಗ್ರಾಮೀಣ ವಿಶ್ವವಿದ್ಯಾಲಯ ಮನಸ್ಸು ಕಟ್ಟುವ ವಿಶ್ವವಿದ್ಯಾಲಯ ಆಗಬೇಕು. ಆ ಮನಸ್ಸು ಕಟ್ಟುವ ವಿಶ್ವವಿದ್ಯಾಲಯ ಆಗಬೇಕೆಂದರೆ ಅದಕ್ಕೆ ಬೇಕಾದಂತಹ ಸಾಮಾಜಿಕ ಅಧ್ಯಯನವನ್ನೂ ಒಳಗೊಂಡಿರಬೇಕು. ಸಾಮಾಜಿಕ ಅಧ್ಯಯನವನ್ನು ಬಿಟ್ಟು ಆರ್ಥಿಕ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಮನಸ್ಸು ಕಟ್ಟುವ ಕೆಲಸ ಆಗಬೇಕು. ಅದರ ಜೊತೆಗೆ ಕೌಶಲ್ಯಗಳನ್ನು ಜೋಡಿಸಬೇಕು, ಅದಕ್ಕೆ ತಾಂತ್ರಿಕತೆಯ ಸ್ಪರ್ಶ ಕೊಡಬೇಕು, ಈ ಎಲ್ಲಾ ಸಂಗತಿಗಳನ್ನು ನಾನು ಮೊನ್ನೆಯೂ ಕೂಡ ಉಲ್ಲೇಖ ಮಾಡಿದ್ದೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:–** ಯಾವ್ಯಾವ ದಿಕ್ಕಿನಲ್ಲಿ ಕಟ್ಟಬೇಕು ಎನ್ನತಕ್ಕಂತಹ ಕೆಲವು ಸಲಹೆ ಕೊಡುವುದು ಒಳ್ಳೆಯದು. ಏಕೆಂದರೆ, ಸಮಾಜದಲ್ಲಿ ಅಭಿವೃದ್ಧಿಗಿಂತ ಅಸ್ಪೃಶ್ಯತೆ ತುಂಬಾ ಅಪಾಯಕಾರಿ ಸ್ಥಿತಿಯಲ್ಲಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಹಾಗೂ ಸ್ವಾಗತ ಮಾಡುತ್ತೇನೆ. ಅದು ಯಾವ ರೀತಿ ಕಟ್ಟಬೇಕೆಂದು ಸಲಹೆ ಕೊಡಬೇಕು. ಯಾವ್ಯಾವ ಅಂಶಗಳ ಮೇಲೆ ಕಟ್ಟಬಹುದು ಎನ್ನುವ ಒಂದು ಸಲಹೆ ಕೊಡಿ. ಅದರ ಬಗ್ಗೆ ಬೆಳಕು ಚೆಲ್ಲಬೇಕು.

**ಶ್ರೀ ಸಿ.ಟಿ. ರವಿ:–** ಮಾನ್ಯ ಅಧ್ಯಕ್ಷರೆ, ಅವರು ಕೇಳುವುದರಿಂದ ವಿಷಯಾಂತರ ಅಂತ ಅನ್ನಿಸಿದರೂ ಪರವಾಗಿಲ್ಲ ಅವರು ಕೇಳಿರುವುದರಿಂದ ಹೇಳುತ್ತಿದ್ದೇನೆ. ಅಸ್ಪೃಶ್ಯತೆಯನ್ನು ಸಾರ್ವಜನಿಕ ಸ್ವರೂಪದಲ್ಲಿ ಆಚರಿಸತಕ್ಕಂತಹ ಸ್ಥಳಗಳನ್ನು ನಾವು ಈಗಾಗಲೇ ಪಟ್ಟಿ ಮಾಡಿದ್ದೇವೆ. ಅದರೊಳಗಡೆ ಪ್ರಮುಖವಾಗಿರುವುದು ದೇವಾಲಯಗಳು. ಆ ಪ್ರಮುಖವಾದ ದೇವಾಲಯಗಳು ಸಮಾಜ ಒಡೆಯುವ ಕೇಂದ್ರಗಳಲ್ಲ. ಜೋಡಿಸುವ ಕೇಂದ್ರಗಳಾಗಬೇಕು. ಅಂದರೆ ಅಲ್ಲಿಂದ ನಾವು ಪ್ರಾರಂಭ ಮಾಡಬೇಕು. ಅದು ಖಾಸಗಿ ದೇವಾಲಯ ಇರಲಿ, ಸಾರ್ವಜನಿಕ ದೇವಾಲಯ ಇರಲಿ. ಅದು ಎಲ್ಲರಿಗೂ ಮುಕ್ತವಾಗಬೇಕು. ಅಲ್ಲಿಂದ ಪ್ರಾರಂಭವಾಗುವಂತಹ ಜಾತಿ ವ್ಯವಸ್ಥೆ. ಕೆಲವು ಮುಜರಾಯಿ ದೇವಾಲಯಗಳಿಗೆ ಮಾತ್ರ ಮುಕ್ತ ಪ್ರವೇಶ ಉಳಿದ ಸಾರ್ವಜನಿಕ ದೇವಾಲಯಗಳು ಅಸ್ಪೃಶ್ಯತೆಯ ಆಚರಣಾ ಕೇಂದ್ರಗಳಾಗಬೇಕಾ? ಹಾಗಾಗಾಗಬಾರದು ಎಂದರೆ ಅಲ್ಲಿಂದ ಪ್ರಾರಂಭವಾಗಬೇಕು? ಇವತ್ತು ದೇವರ ದಯೆಯಿಂದ ಹೋಟೆಲ್‌ಗಳಲ್ಲಿ 90% ಅಸ್ಪೃಶ್ಯತೆ ಕಡಿಮೆಯಾಗಿದೆ. ಸಾರ್ವಜನಿಕ ಸ್ಥಳಗಳು ಹಾಗೂ ಬಸ್ಸುಗಳಲ್ಲಿ 100% ಅಸ್ಪೃಶ್ಯತೆ ಕಡಿಮೆಯಾಗಿದೆ. ಆದರೆ ಅಸ್ಪೃಶ್ಯತೆ ಇರುವ ಜಾಗಗಳು ಯಾವುದು? ಹಾಸ್ಟೆಲ್‌ಗಳಲ್ಲಿ ಕೇವಲ SC/ST ಮಕ್ಕಳನ್ನು ಮಾತ್ರ ಹಾಸ್ಟೆಲ್‌ಗಳಲ್ಲಿ ಬಿಡುವುದಲ್ಲ. ಅದು ಒಂದು ರೀತಿ ಸಾಮೂಹಿಕವಾಗಿ ಅಸ್ಪೃಶ್ಯತೆ ಆಚರಣೆ ಬೆಳೆಯುವುದಕ್ಕೆ ಹಾಗೂ ಪ್ರತ್ಯೇಕತೆ ಭಾವನೆ ಬೆಳೆಯುವುದಕ್ಕೆ ಕಾರಣವಾಗುತ್ತದೆ. SC/ST ಹಾಸ್ಟೆಲ್‌ಗಳಲ್ಲಿ ಎಲ್ಲಾ ವರ್ಗದವರಿಗೂ ಪ್ರವೇಶ ಸಿಗುವ ಹಾಗೆ

ಆಗಬೇಕು. ಆ ಮಕ್ಕಳಿಗೆ ಆದ್ಯತೆ ಹೆಚ್ಚು ಕೊಟ್ಟರೂ ಕೂಡ ಎಲ್ಲಾ ವರ್ಗದವರಿಗೂ ಪ್ರವೇಶ ಸಿಗುವಂತಹ ವಾತಾವರಣ ನಿರ್ಮಾಣವಾಗಬೇಕು.

**ಶ್ರೀ ಶಿವಾನಂದ ಎಸ್. ಪಾಟೀಲ್:–** ನಿಮ್ಮ ಎಂ.ಪಿ.ಯವರೇ. ದೇವಾಲಯಗಳಲ್ಲಿ ಜನಗಳಿಗೆ ಒಳಗೆ ಬನ್ನಿ ಎಂದರೂ ಬರುವುದಿಲ್ಲ ಹೊರಗೆ ಕೂರುತ್ತಾರೆ, ಸ್ವಲ್ಪ ದಯಮಾಡಿ ಅದು ಅಲ್ಲಿಂದ ಪ್ರಾರಂಭವಾಗಲಿ.

**ಶ್ರೀ ಸಿ.ಟಿ. ರವಿ:–** ಈ ಮಾನಸಿಕತೆ ಏಕೆ ಬೆಳೆದಿದೆ ಎಂದರೆ, ಅವರಿಗೂ ಗೊತ್ತು ಮೇಲ್ವರ್ಗದವರ ಮಾನಸಿಕತೆ ಹೇಗೆ ಇದೆ ಎಂದು. ಆ ಮೇಲ್ವರ್ಗದವರ ಮಾನಸಿಕತೆ ಅನುಗುಣವಾಗಿ ಅವರು ಹಾಗೆ ನಡೆದುಕೊಂಡರು. ಏಕೆ?

**ಶ್ರೀ ಶಿವಾನಂದ ಎಸ್. ಪಾಟೀಲ್:–** ತಾವು ಸಮಾಜಕ್ಕೆ ತಪ್ಪು ಸಂದೇಶ ಕೊಡಬಾರದು. ನನ್ನ ಕ್ಷೇತ್ರದಲ್ಲಿ ನಿಮ್ಮ ಎಂಪಿಯವರೇ ಮಾಡಿದ್ದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಸಿ.ಟಿ. ರವಿ:–** ಅವರು ಅತ್ಯಂತ ಸೀನಿಯರ್ ಇದ್ದಾರೆ. ನಿಮ್ಮ ಕ್ಷೇತ್ರದ ಎಂ.ಪಿ. ಅವರೇ. ನೀವೂ ಅವರೂ ಕೂಡಿ ಇದ್ದವರೇ. ನಾನು ಹೇಳುವುದೇನೆಂದರೆ, ಯಾರು ಮೇಲ್ಪಂಕ್ತಿ ಹಾಕಬೇಕಾಗಿತ್ತು ಅವರೇ ರಿವರ್ಸ್ ಗೇರಿನ ಕಡೆಗೆ ತೆಗೆದುಕೊಂಡು ಹೋಗತಕ್ಕಂಥದ್ದು ಕೂಡ ತಲೆ ತಗ್ಗಿಸುವಂತಹ ವಿಚಾರ. ಅದು ಸರಿಯಲ್ಲ. ಎಂ.ಪಿ. ಯವರು ಆ ರೀತಿ ಮಾಡಿದ್ದು ಕೂಡ ಅದು ಒಂದು ದೌರ್ಬಲ್ಯದ ಮಾನಸಿಕ ಸ್ಥಿತಿ ಅದು ಸರಿಯಲ್ಲ. ಅದನ್ನು ಏಕೆ ಹೀಗೆ ಮಾಡಿದರು ಎಂದರೆ, ಮೇಲ್ವರ್ಗದ ಮಾನಸಿಕತೆ ನನ್ನ ಕ್ಷೇತ್ರದಲ್ಲಿ ನಡೆದದ್ದು ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆದ್ದ. ಸಾಮರ್ಥ್ಯದಿಂದ ಗೆದ್ದಿದ್ದು ಅಲ್ಲ. ಒಂದು SC reserve constituency ಯಲ್ಲಿ ಯಾರಾದರೂ ಬಂದರೆ ಚಪ್ಪಲಿ ಬಿಟ್ಟು ಕೈ ಕಟ್ಟಿ ನಿಂತುಕೊಳ್ಳುವನು. ಅವನು ಬಹಳ ಒಳ್ಳೆಯವನು ಅವನಿಗೆ ಎಲ್ಲರೂ ಓಟು ಹಾಕಿ ಎಂದು ಓಟು ಹಾಕಿರುವರು. ನಿಜವಾಗಿ ಇನ್ನೊಬ್ಬ ದಕ್ಷ ಕೆಲಸ ಮಾಡುವವನು ಇದ್ದ. ಅವನಿಗೆ ಸೋಲಿಸಿಬಿಟ್ಟರು. ಏಕೆಂದರೆ

ಸಮಾಜದ ಕಣ್ಣಿಗೆ ಈ ಚಪ್ಪಲಿ ಬಿಟ್ಟು ಕೈ ಮುಗಿದುಕೊಂಡು ನಿಂತುಕೊಳ್ಳುವವನು ಅವನು ಒಳ್ಳೆಯವನಾಗಿ ಕಂಡ. ಇದು ಒಂದು ರೀತಿಯ ಅಸ್ಪೃಶ್ಯತೆಯ ಪರಮಾವಧಿನೆ. ಒಂದು ಹೊಸ ರೂಪದ ಅಸ್ಪೃಶ್ಯತೆ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

**ಶ್ರೀ ಬಿ.ಬಿ. ನಿಂಗಯ್ಯ:–** ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುತ್ತಾ, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ವಿಚಾರದಲ್ಲಿ ಮಾನ್ಯ ರವಿಯವರು ಪ್ರಸ್ತಾಪ ಮಾಡಿದ್ದನ್ನು ನಾನೂ ಕೂಡ ಒಪ್ಪುತ್ತೇನೆ. ನಾವೆಲ್ಲಾ ವ್ಯಾಸಂಗ ಮಾಡುತ್ತಿದ್ದಾಗ ಬರೀ ಸಾರ್ವಜನಿಕ ವಿದ್ಯಾರ್ಥಿನಿಲಯಗಳು ಎಂದು ಇದ್ದವು. ಆ ನಂತರ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಬೇರೆ, ಹಿಂದುಳಿದ ವರ್ಗಗಳಿಗೆ ಬೇರೆ ಎನ್ನತಕ್ಕಂಥದ್ದು ತಂದು ಎಲ್ಲೋ ಒಂದು ಕಡೆಗೆ ಜಾತಿ ಹೋಗಬೇಕು ಎನ್ನತಕ್ಕಂತಹ ಆಂದೋಲನ ಈ ದೇಶದಲ್ಲಿ ಏನು ಪ್ರಾರಂಭವಾಯಿತು? ಆ ತತ್ವಕ್ಕೆ ವಿರುದ್ಧವಾಗಿ ಈ ತೀರ್ಮಾನಗಳಾಗಿವೆ ಎಂದು ನನಗನ್ನಿಸುತ್ತದೆ. ಆ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ಸಮಾಜ ಕಲ್ಯಾಣ ಸಚಿವರು ಕರೆದಂತಹ ಸಂದರ್ಭದಲ್ಲಿ ನಾನು ಇದನ್ನು ಪ್ರಸ್ತಾಪ ಮಾಡಿದ್ದೆ. ಬಹಳ ಗಂಭೀರವಾದ ಸಮಸ್ಯೆ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಟಿ. ರವಿ:–** ತಳ ಹಂತದಿಂದ ಪ್ರಸ್ತಾಪವಾಗತಕ್ಕಂತಹ ಬೇಡಿಕೆಗಳಿಗನುಗುಣವಾಗಿ ಯೋಜನೆ ರೂಪಿಸಿಕೊಳ್ಳಬೇಕು. ಸರ್ಕಾರದ ಕಾರ್ಯಕ್ರಮಗಳಲ್ಲಿ ಅವರನ್ನು ಜೋಡಿಸತಕ್ಕಂತಹ ಹಾಗೂ ಸಹಭಾಗಿತ್ವವನ್ನು ರೂಪಿಸತಕ್ಕಂತಹ ಕಡೆಗಳಲ್ಲಿ ಹೆಚ್ಚಿನ ಚಿಂತನೆಗಳಾಗಬೇಕು. ನಾವು ಪಂಚಾಯಿತಿಗಳಿಗೆ ಅನುದಾನ ಕೊಡುತ್ತೇವೆ. ಆ ಅನುದಾನದಲ್ಲಿ ದೊಡ್ಡ ಪಂಚಾಯಿತಿಗೆ 12 ಲಕ್ಷ ಅನುದಾನ, 13ನೇ ಹಣಕಾಸಿನ ಆಯೋಗದಿಂದ ಅನುದಾನ, ಶಾಸನಬದ್ಧ ಅನುದಾನ, ಹಿಂದುಳಿದ ಪ್ರದೇಶಗಳ ಸ್ಥಳೀಯ ಅಭಿವೃದ್ಧಿ ನಿಧಿ, ಇದಲ್ಲದೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಹಾಗೂ ತಾಲ್ಲೂಕು

ಪಂಚಾಯಿತಿ ಅಧ್ಯಕ್ಷರಿಗೆ ಎರಡು ಕೋಟಿ ಮೂರು ಕೋಟಿ, ಒಂದು ಕೋಟಿ ಕೊಡುವುದು, ಇತ್ಯಾದಿ ಅನುದಾನವನ್ನು ನಾವು ಕೊಡುತ್ತಿದ್ದೇವೆ. ದೊಡ್ಡ ಪಂಚಾಯಿತಿಗೆ 12 ಲಕ್ಷ ರೂ. ಅನುದಾನ. ನಿಜವಾಗಿಯೂ ಪಂಚಾಯಿತಿಗೆ ಕೊಡುವ ಅನುದಾನದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಬಳಕೆ ಆಗುವ ಅನುದಾನ ಎಷ್ಟು? ಬಹಳಷ್ಟು ಪಂಚಾಯಿತಿಗಳಲ್ಲಿ ಕರೆಂಟ್ ಬಿಲ್ ಕಟ್ಟುವುದಕ್ಕೆ ಸಾಕಾಗುವುದಿಲ್ಲ. ಕುಡಿಯುವ ನೀರಿನ ಮೇಂಟೆನೆನ್ಸ್ ಮಾಡುವುದಕ್ಕೆ ಕರೆಂಟ್ ಬಿಲ್ ಕಟ್ಟುವುದಕ್ಕೆ ನಾವು ಕೊಡುವ ಅನುದಾನ ಸಾಕಾಗುವುದಿಲ್ಲ. ಒಂದು ರೂಪಾಯಿಯೂ ಪಂಚಾಯಿತಿಗಳಿಗೆ ಅನುದಾನ ಸಿಗದೇ ಇದ್ದಾಗ ಅವರು ಹೇಗೆ plan ಮಾಡುವುದಕ್ಕೆ ಸಾಧ್ಯ? ನಿಮಗೆ 18,20,25 ಜನ ಗ್ರಾಮ ಪಂಚಾಯಿತಿ ಸದಸ್ಯರು ಇರುವ ಕಡೆಗಳಲ್ಲಿ ಅವರು ಅಲ್ಲಿ 20,000 30,000 ಹಂಚಿಕೊಳ್ಳುತ್ತಾರೆ. ಈ ರೀತಿ 20 ಸಾವಿರ, 30 ಸಾವಿರ ಎಂದು ಹಂಚಿಕೊಂಡು ಯಾವ ಶಾಶ್ವತವಾಗಿರತಕ್ಕಂಥ ಮೂಲ ಸೌಕರ್ಯಗಳ ಅಭಿವೃದ್ಧಿಯನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ?. ಹಾಗಾಗಿ ನಿಜವಾಗಿಯೂ ನಾವು ಗ್ರಾಮಗಳ ಅಭಿವೃದ್ಧಿ ಮಾಡಬೇಕೆಂದರೆ ಆ ಗ್ರಾಮಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಇರುವಂಥದ್ದಕ್ಕೆ ಅನುದಾನವನ್ನು ಒದಗಿಸುವಂಥದ್ದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ ಅಥವಾ ಅವುಗಳನ್ನು ಸ್ವಾವಲಂಬಿ ಗ್ರಾಮ ಪಂಚಾಯಿತಿಗಳನ್ನಾಗಿ ಹೇಗೆ ಮಾಡಬೇಕು ಎಂಬುದರ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾದ ಅವಶ್ಯಕತೆಯಿದೆ. ಇಲ್ಲದಿದ್ದರೆ ಕರೆಂಟ್ ಬಿಲ್‌ನ್ನು ಕೂಡ ಕಟ್ಟುವುದಕ್ಕೆ ಆಗದೇ ಕೊನೆಗೆ ಟ್ಯೂಬ್‌ಲೈಟ್ ಹಾಕಿಸಿರಿ ಎಂದು ಅವರು ನಮ್ಮನ್ನೇ ಕೇಳುತ್ತಾರೆ ನೋಡಿ. ಹಳ್ಳಿಗಳಲ್ಲಿ ಟ್ಯೂಬ್‌ಲೈಟ್ ಹಾಕುವುದು ಯಾವಾಗೆಂದರೆ ಊರು ಹಬ್ಬ ಎಂದು ಜಾತ್ರೆಗಳನ್ನು ಮಾಡುತ್ತಾರಲ್ಲ, ಅದಕ್ಕೆ ಮೂರು ದಿನಗಳ ಮುಂಚೆ ಟ್ಯೂಬ್‌ಲೈಟ್‌ಅನ್ನು ಹಾಕುತ್ತಾರೆ. ಈ ರೀತಿ ಮೂರು ದಿನಗಳ ಮುಂಚೆ ಟ್ಯೂಬ್‌ಲೈಟ್ ಹಾಕಿದರೆ ಅವುಗಳು ಒಂದು ವಾರ ಅಥವಾ ಹದಿನ್ನೈದು ದಿವಸಗಳ ಕಾಲ ಉರಿಯುತ್ತವೆ. ಆಮೇಲೆ ಮತ್ತೆ ಅಲ್ಲಿ ಟ್ಯೂಬ್‌ಲೈಟ್ ಹಾಕಬೇಕೆಂದರೆ ಮತ್ತೆ ಮುಂದಿನ ಊರು ಹಬ್ಬವೇ ಬರಬೇಕು. ಅಂದರೆ

ಊರು ಹಬ್ಬದಿಂದ ಮುಂದಿನ ಊರು ಹಬ್ಬದವರೆಗೆ ಅಲ್ಲಿ ಬೀದಿ ದೀಪವಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ದೀಪವಿಲ್ಲದಿರುವುದು ಇಂದಿನ ವಾಸ್ತವಿಕ ಸ್ಥಿತಿಯಾಗಿದೆ. ಈಗ ನಮಗೆ ಅಲ್ಲಿರುವವರು ಹೇಳುವುದೇನೆಂದರೆ, ಅಣ್ಣಾ ಆ ಪಂಚಾಯಿತಿಯವರಿಗೆ ಹೇಳಿ ಊರು ಹಬ್ಬಕ್ಕಾದರೂ ಲೈಟ್ ಹಾಕುವ ಹಾಗೆ ಮಾಡ್ರಣ್ಣಾ ಎಂದು ಹೇಳುತ್ತಾರೆ. ಅಂದರೆ ಅವರು ತೀರ್ಮಾನಕ್ಕೆ ಬಂದುಬಿಟ್ಟಿದ್ದಾರೆ, ಲೈಟ್ ಹಾಕಬೇಕೆಂದರೆ ಊರು ಹಬ್ಬಕ್ಕೇ ಲೈಟ್ ಹಾಕುವುದೆಂದು. ಹೀಗಾಗಿ ಈ ರೀತಿ ಊರು ಹಬ್ಬಕ್ಕೇ ಲೈಟ್ ಹಾಕಬೇಕು ಎನ್ನುವುದು ಬಿಟ್ಟು, ಅವರಿಗೆ ನಾವು ಕನಿಷ್ಠ ನೀರು, ಬೀದಿ ದೀಪ, ರಸ್ತೆ, ಸ್ವಚ್ಛತೆ, ಇವುಗಳ ಕಡೆಗಾದರೂ ವಿಶೇಷವಾದಂಥ ಆದ್ಯತೆಯನ್ನು ಕೊಡಬೇಕು. ಈ ಬಗ್ಗೆ ವಿಶೇಷ ಅಧ್ಯಯನದ ಅವಶ್ಯಕತೆಯಿದೆ. ನಾನು Information Department ನಿಂದ ಒಂದು ಮಾಹಿತಿಯನ್ನು ಕೇಳಿದ್ದೆ. ಏನೆಂದರೆ, 1948 ರಿಂದ 2013 ರವರೆಗೆ ಗ್ರಾಮಗಳಿಗೆ ವಿವಿಧ ಕುಡಿಯುವ ನೀರಿನ ಯೋಜನೆಗಳಲ್ಲಿ ವೆಚ್ಚ ಮಾಡಿರತಕ್ಕಂಥ ಹಣವೆಷ್ಟೇಂದು ಕೇಳಿದ್ದೆ. ಆಗ ಅವರು ಏನು ಹೇಳಿದರೆಂದರೆ, ಸರ್ ನೀವು 1948 ಇಸವಿಯಿಂದ ಕೇಳಿಬಿಟ್ಟಿದ್ದೀರಿ, 1948 ರಿಂದ ಮಾಹಿತಿ ಕೇಳಿರುವುದರಿಂದ ಸ್ವಲ್ಪ ದಿನಗಳ ಸಮಯ ಬೇಕಾಗುತ್ತದೆಂದು ಹೇಳಿ, fax ಕಳುಹಿಸಿರುವುದನ್ನೆಲ್ಲ ತೋರಿಸಿ ಇಲ್ಲಾ ಸರ್, ನಾವೆಲ್ಲದರ ಬಗ್ಗೆ ತಕ್ಷಣ information ಕೊಡುವುದಕ್ಕಾಗುತ್ತಿಲ್ಲ, ಎಲ್ಲಾ informationಗಳನ್ನು collect ಮಾಡಿಕೊಡುತ್ತೇವೆಂದರು. ಬಹುಶಃ ನಾವೇನಾದರೂ ಆ ಅಂಕಿ ಅಂಶಗಳನ್ನು ತೆಗೆದುಕೊಂಡು ಯೋಚನೆ ಮಾಡಿದರೆ ಊರು ಊರಿನಲ್ಲಿಯೂ ಡ್ಯಾಂ ಕಟ್ಟಿ ಕುಡಿಯುವ ನೀರನ್ನು ಕೊಡಬಹುದಾದಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಆದರೆ ನೀರನ್ನು ಕೊಡುವುದಕ್ಕೆ ಇದುವರೆಗೆ ಸಾಧ್ಯವಾಗಿಲ್ಲ. ಆದರೆ ಹಣವನ್ನು ಖರ್ಚು ಮಾಡಿದ್ದೇವೆ. ಪ್ರತಿ ವರ್ಷ ಕುಡಿಯುವ ನೀರಿಗೆ ಹಣದ ಸಮಸ್ಯೆ ಯಾವತ್ತೂ ಕಾಡಿಲ್ಲ. ಆ ಕುಡಿಯುವ ನೀರಿನ ಯೋಜನೆ ಕೇಂದ್ರದ್ದಿರಬಹುದು ಅಥವಾ ರಾಜ್ಯದ್ದಿರಬಹುದು, ಹಣದ ಸಮಸ್ಯೆ ಯಾವತ್ತೂ ಕಾಡಿಲ್ಲ. ಯಾವ ಸಮಸ್ಯೆ ಕಾಡಿರುವುದೆಂದರೆ, ಸರಿಯಾದ ಯೋಜನೆಗಳನ್ನು ರೂಪಿಸುವಲ್ಲಿ ಆಗಿರುವ

ಕೊರತೆ ನಮಗೆ ಕಾಡುತ್ತಿದೆ. ಸರಿಯಾದ ಯೋಜನೆಗಳನ್ನು ರೂಪಿಸಿಲ್ಲ. ಮೂರು ವರ್ಷದ ಹಿಂದೆ ಮಾಡಿದ ಯೋಜನೆ ಇಂಪ್ಲಿಮೆಂಟ್ ಆಗದೆ ಈ ವರ್ಷ ಲ್ಯಾಪ್ಸ್ ಎನ್ನುವಂತಾಗಿದೆ. ಈ ವರ್ಷಕ್ಕೆಂದು ಹೊಸ ಸ್ಕೀಂ ಅನ್ನು ರೆಡಿ ಮಾಡಿಕೊಡುತ್ತಾರೆ. ಇದು ಕಂಟ್ರ್ಯಾಕ್ಟರ್‌ಗಳನ್ನು, ಇಂಜಿನಿಯರ್‌ಗಳನ್ನು, ಕೆಲವು ರಾಜಕಾರಣಿಗಳನ್ನು ಸಾಕುವ ಯೋಜನೆಗಳಾಗಿ ಮಾತ್ರ ಪರಿವರ್ತನೆಯಾಗಿವೆ. ಜನರಿಗೆ ನೀರನ್ನು ಕೊಡುವ ಯೋಜನೆಯಾಗಿ ಪರಿವರ್ತನೆಯಾಗಿಲ್ಲ. ಕಂಟ್ರ್ಯಾಕ್ಟರ್‌ಗಳನ್ನು ಸಾಕುವಂಥ ಯೋಜನೆಗಳು, ಇಂಜಿನಿಯರ್‌ಗಳನ್ನು ಸಾಕುವಂಥ ಯೋಜನೆಗಳು, ಕೆಲವು ರಾಜಕಾರಣಿಗಳನ್ನು ಸಾಕುವಂಥ ಯೋಜನೆಗಳಾಗಿ ಪರಿವರ್ತನೆಯಾಗಿವೆಯೇ ಹೊರತು ಜನರಿಗೆ ನೀರನ್ನು ಕೊಡುವಂಥ ಯೋಜನೆಯಾಗಿಲ್ಲ. ಅದಕ್ಕಾಗಿ ನೀವು ಕಳೆದ 50 ವರ್ಷದ ಕುಡಿಯುವ ನೀರಿಗೆ ನಮ್ಮ ರಾಜ್ಯಕ್ಕೆ ಖರ್ಚು ಮಾಡಿರುವಂಥ ಯೋಜನೆಗಳ ಬಗ್ಗೆ ಮಾಹಿತಿ ತೆಗೆದರೆ, ನೀವು ಡ್ಯಾಂಗಳಿಂದಲೇ ಎಲ್ಲಾ ಗ್ರಾಮಗಳಿಗೂ ಶಾಶ್ವತವಾಗಿ ಕುಡಿಯುವ ನೀರಿಗೆ ಖರ್ಚು ಮಾಡಬೇಕಾದ್ದಕ್ಕಿಂತ ಹೆಚ್ಚಿನ ಅನುದಾನವನ್ನು, ಹೆಚ್ಚಿನ ಹಣವನ್ನು ಅದಕ್ಕಾಗಿ ನಾವು ಖರ್ಚು ಮಾಡಿದ್ದೇವೆಂದು ನನಗನ್ನಿಸುತ್ತದೆ. ಹೀಗಾಗಿ ಈ ನಿಟ್ಟಿನಲ್ಲಿ ಒಂದು ಅಧ್ಯಯನ ಮಾಡಿ ನೀರಿನ ಮೂಲವನ್ನು ಆಧರಿಸಿಯೇ ಯೋಜನೆಯನ್ನು ರೂಪಿಸಬೇಕು. ಶಾಶ್ವತವಾಗಿರತಕ್ಕಂಥ ನೀರಿನ ಮೂಲವನ್ನು ಆಧರಿಸಿಯೇ ಯೋಜನೆಯನ್ನು ರೂಪಿಸಬೇಕು. ಇಲ್ಲದಿದ್ದರೆ ಕೇವಲ ಹಣ ಹೊಡೆಯತಕ್ಕಂಥ, ಹಣವನ್ನು ಪೋಲು ಮಾಡತಕ್ಕಂಥ ಯೋಜನೆಯಾಗುತ್ತವೆಯೇ ಹೊರತು ಅದರಿಂದ ಜನರಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ಶಾಶ್ವತವಾಗಿರತಕ್ಕಂಥ ನೀರಿನ ಮೂಲಕವನ್ನು ಆಧರಿಸಿಯೇ ಯೋಜನೆಯನ್ನು ರೂಪಿಸಬೇಕಾದಂಥ ಅವಶ್ಯಕತೆಯಿದೆ. ಈಗಾಗಲೇ ಒಂದು ವರ್ಷದಲ್ಲಿಯೇ ನೀವು ನಂಜಯ್ಯನಮಠ್ ಸಮಿತಿ ಮಾಡಿ ಗ್ರಾಮ ಪಂಚಾಯಿತಿ ಪುನರ್ವಿಂಗಡಣೆಗೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ಈಗಾಗಲೇ ಮಾಡಿದ್ದೀರಿ. ಇದನ್ನು ನೀವು ಮಾಡಿರುವುದು ಒಳ್ಳೆಯ ಕೆಲಸ. ಗ್ರಾಮ ಪಂಚಾಯತಿ ಸುಧಾರಣೆಗೆ ಸಂಬಂಧಿಸಿದಂತೆ ಹಿರಿಯ ಸದಸ್ಯರಾದಂತಹ

ಮಾನ್ಯ ರಮೇಶ್‌ಕುಮಾರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೀರಿ. ಅವರು ವಿವಿಧ ರಾಜಕೀಯ ಪಕ್ಷಗಳ ಸಲಹೆಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತಾತ್ಮಕವಾಗಿ ಹೇಗೆ ಸುಧಾರಣೆಯನ್ನು ತರಬೇಕು ಎನ್ನುವ ಬಗ್ಗೆ ಈಗಾಗಲೇ ಕೇಳಿದ್ದಾರೆ. ಇಲ್ಲವೋ ಒಳ್ಳೆಯ ನಿಟ್ಟಿನಲ್ಲಿ ತಾವು ಇಟ್ಟಿರತಕ್ಕಂಥ ಹೆಜ್ಜೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಈ ಶೌಚಾಲಯ ವಿಷಯಕ್ಕೆ ಬಂದರ್ 70% ಶೌಚಾಲಯವಿಲ್ಲ, ಕೇವಲ 31% ಮಾತ್ರ ಗ್ರಾಮಗಳಲ್ಲಿ ಶೌಚಾಲಯವಿರುವುದು. ಈ ವಿಚಾರದಲ್ಲಿ ನಾವೊಂದು ಕಾಲಮಿತಿಯೊಳಗೆ ಇಡೀ ಸರ್ಕಾರದ ಸಾಮರ್ಥ್ಯವನ್ನು ಅದಕ್ಕೆ ಹಾಕಿ ಸಂಪೂರ್ಣ ಪ್ರಮಾಣದಲ್ಲಿ ಶೌಚಾಲಯವಾಗಲೇಬೇಕು ಎನ್ನತಕ್ಕಂಥದ್ದನ್ನು ಒಂದು ಆಂದೋಳನದ ರೀತಿಯಲ್ಲಿ ಅನುಷ್ಠಾನ ಮಾಡುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ? ಇದಕ್ಕಾಗಿ ಎಲ್ಲಾ ಇಲಾಖೆಗಳನ್ನು ಬಳಸಿಕೊಳ್ಳೋಣ, ಎಲ್ಲಾ ಸಾಮರ್ಥ್ಯವನ್ನು ಹಾಕೋಣ. ನಾವೊಂದು ಗುರಿಯನ್ನು ಇಟ್ಟುಕೊಳ್ಳೋಣ, ಇನ್ನು ಎರಡು ವರ್ಷದೊಳಗೆ ಶೇಕಡ ನೂರರಷ್ಟು ಎಲ್ಲ ಮನೆಗಳಿಗೆ ಶೌಚಾಲಯವನ್ನು ಕೊಡುತ್ತೇವೆಂದು ಹೇಳಿ ಅದಕ್ಕೊಂದು ಬದ್ಧತೆಯ ಪ್ರದರ್ಶನವನ್ನು ನಾವು ಏಕೆ ಮಾಡಬಾರದು?. ನಾವು ಇನ್ನು ಮುಂದೆ ಹೇಳೋಣ, ಶೌಚಾಲಯವಿಲ್ಲವೆಂದರೆ ಬಿ.ಪಿ.ಎಲ್. ಕಾರ್ಡ್ ಕೊಡುವುದಿಲ್ಲ, ಶೌಚಾಲಯವಿರಬೇಕು ಎನ್ನುವುದು ಕೂಡ ಒಂದು ಮಾನಸಿಕತೆಯ ವಿಚಾರವೇ ಆಗಿದೆ. ಶೌಚಾಲಯ ನಿರ್ಮಾಣ ಮಾಡುವುದಕ್ಕೆ ಇವತ್ತು ಹಣಕಾಸಿನ ಕೊರತೆಯಿಲ್ಲ. ನಾವು ಎಸ್‌ಸಿ/ಎಸ್‌ಟಿ ಯವರಿಗೆ 15 ಸಾವಿರ ರೂ.ಗಳನ್ನು ಕೊಡುತ್ತೇವೆ, ಜನರಲ್ ಕ್ಯಾಟಗರಿಯವರಿಗೆ 10 ಸಾವಿರ ರೂ.ಗಳನ್ನು ಕೊಡುತ್ತೇವೆ. ಕಟ್ಟಿಕೊಳ್ಳಬೇಕು ಎನ್ನುವವನಿಗೆ ಹಣದ ಕೊರತೆಯಲ್ಲ, ಹಿಂದೆ ಒಂದು ಕಾಲದಲ್ಲಿ ಅವನು ಹೇಳಬಹುದಿತ್ತು, ಹಣದ ಕೊರತೆಯಿಂದ ಶೌಚಾಲಯ ಕಟ್ಟುವುದಕ್ಕೆ ಆಗಲಿಲ್ಲವೆಂದು. ಇವತ್ತು ಪ್ರತಿ ಮನೆಯಲ್ಲಿಯೂ ಮೂಬೈಲ್ ಇದೆ. ಮೊಬೈಲ್‌ಗೆ ಕರೆನ್ಸಿ ಹಾಕಿಸುತ್ತಾರೆ. ಒಂದು ಸಣ್ಣ ಕಡಿಮೆ ದರದ ಮೊಬೈಲ್ ತೆಗೆದುಕೊಳ್ಳುತ್ತೇನೆಂದರೂ ಕೂಡ ಕನಿಷ್ಠ 3 ಸಾವಿರ ರೂ.ಗಳು ಬೇಕಾಗುತ್ತದೆ. ಮೊಬೈಲ್‌ಗೆ ಕರೆನ್ಸಿ ಹಾಕಿಸಲು ತಿಂಗಳಿಗೆ

ಕನಿಷ್ಠ 500 ರೂ.ಗಳನ್ನಾದರೂ ಖರ್ಚು ಮಾಡುತ್ತಾರೆ. ಇದಕ್ಕಾಗಿ ಇಷ್ಟು ಖರ್ಚು ಮಾಡುವ ಮನೆಗಳವರಿಗೆ ಶೌಚಾಲಯ ಕಟ್ಟಿಸಿಕೊಳ್ಳಲು ಆರ್ಥಿಕ ಸಮಸ್ಯೆ ಕಾಡುತ್ತಿಲ್ಲ. ಇವತ್ತು ಶೌಚಾಲಯ ನಿರ್ಮಾಣಕ್ಕೆ ಸರ್ಕಾರ ನೆರವು ಕೊಡುತ್ತದೆ. ಕಟ್ಟಬೇಕು ಎನ್ನುವ ವಿಚಾರದಲ್ಲಿ ಮಾನಸಿಕ ಸಮಸ್ಯೆಯಿದೆ. ಆ ಶೌಚಾಲಯವನ್ನು ಬಳಕೆ ಮಾಡಬೇಕಾಗಿರುವಂಥ ವಿಷಯದಲ್ಲಿ ಮಾನಸಿಕ ಸಮಸ್ಯೆಯಿದೆ. ಆ ಮಾನಸಿಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕೆಂದರೆ ಅವರಿಗೆ ನೀವು ಒಂದು ರೀತಿಯಲ್ಲಿ ಶಾಸನದ ಮೂಲಕವಾಗಿಯೇ ಮಾಡಬೇಕಾಗುತ್ತದೆ. ಶೌಚಾಲಯವಿಲ್ಲವೆಂದರೆ ಬಿ.ಪಿ.ಎಲ್. ಕಾರ್ಡ್ ಸೌಲಭ್ಯವನ್ನು ಕೊಡುವುದಿಲ್ಲ, ಯಾವುದೇ ಆಸ್ಪತ್ರೆ ಸೌಲಭ್ಯವಿಲ್ಲ, ಎರಡು ವರ್ಷ ಗಡುವು ಕೊಡುತ್ತೇವೆ, ಶೌಚಾಲಯ ನಿರ್ಮಾಣಕ್ಕೆ ಹಣವನ್ನು ಸರ್ಕಾರ ಕೊಡುತ್ತದೆ, ನೀನು ಕಟ್ಟಿಸಿಕೋ ಎಂದು ಹೇಳುವಂಥ ಇಚ್ಛಾಶಕ್ತಿಯ ಜೊತೆಗೆ, ನಾವೆಲ್ಲಾ ಜನಪ್ರತಿನಿಧಿಗಳು, ಎಲ್ಲಾ ಸಂಘಸಂಸ್ಥೆಗಳನ್ನು ಈ ವಿಚಾರದಲ್ಲಿ ಜೋಡಿಸಿ ಒಂದು ಆಂಧೋಳನದ ರೂಪದಲ್ಲಿ ಮಾಡಿದರೆ ಶೇಕಡ ನೂರರಷ್ಟು ನಾವು ಶೌಚಾಲಯವನ್ನು ನಿರ್ಮಾಣ ಮಾಡಿಸುವುದಕ್ಕೆ ಅವಕಾಶಗಳಿವೆ. ಇಲ್ಲದಿದ್ದರೆ ನಾವು ಹೀಗೆಯೇ ಬಿಟ್ಟರೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಒಂದು ಆಂದೋಳನದ ರೀತಿಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಯೋಚಿಸಬೇಕಾದ ಅಗತ್ಯವಿದೆ. ಇನ್ನು ಗ್ರಾಮ ಪಂಚಾಯಿತಿಯ ಆಸ್ತಿಯ ರಕ್ಷಣೆ ವಿಷಯವಾಗಿ ಹೇಳುವುದೇನೆಂದರೆ, ನಗರದ ಸುತ್ತಮುತ್ತವಿರತಕ್ಕಂಥ ಗ್ರಾಮ ಪಂಚಾಯಿತಿಗಳೇನಿವೆ ಇದರ ಸುತ್ತಮುತ್ತಲಿರುವ ಪಂಚಾಯಿತಿಯ ಆಸ್ತಿಗಳಿಗೆ ಕೋಟಿಗಟ್ಟಲೆ ಬೆಲೆಯಿದೆ. ಬೆಂಗಳೂರಿನ ಸುತ್ತಮುತ್ತವಿರತಕ್ಕಂಥ ಗ್ರಾಮ ಪಂಚಾಯಿತಿಗಳ ಆಸ್ತಿಗಳಿಗೆ ಕೋಟಿಗಟ್ಟಲೆ ಬೆಲೆಯಿದೆ. ಮಾನ್ಯ ಉಪಾಧ್ಯಕ್ಷರೆ, ಶೌಚಾಲಯದ ಬಗ್ಗೆ ನಾನು ಹೇಳುತ್ತಿರುವಾಗ ಯಾರೋ ಒಬ್ಬರು ಚೀಟಿಯನ್ನು ಕಳುಹಿಸಿ ನೀರು ಇಲ್ಲದಿದ್ದರೆ ಶೌಚಾಲಯ ಯೋಜನೆ ಯಶಸ್ವಿಯಾಗುವುದಿಲ್ಲವೆಂದು ಬರೆದು ಕಳುಹಿಸಿದ್ದಾರೆ. ಹೊರಗೆ ಹೋದರೂ ನೀರು ಬೇಕು, ಒಳಗೆ ಹೋದರೂ ಕೂಡ ನೀರು ಬೇಕು. ನೀರು

ಇರಲೇಬೇಕು. ನಮ್ಮಲ್ಲಿ ಪೇಪರ್ ವ್ಯವಸ್ಥೆ ಕೇವಲ 1 ರಿಂದ 2 ಪರ್ಸೆಂಟ್ ಇರಬಹುದು. ನೀರು ಬೇಕೇ ಬೇಕು. ನೀರು ಇರುತ್ತದೆ. ಮುಖ್ಯವಾಗಿ ಶೌಚಾಲಯವನ್ನು ಬಳಸತಕ್ಕಂಥ ವಿಚಾರದಲ್ಲಿ ಮಾನಸಿಕ ಸಮಸ್ಯೆಯೇ ಕಾರಣ.

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ನೋಡಿ. ಸಿ.ಟಿ. ರವಿಯವರೆ, ಆ ಚೀಟಿ ಬಂತಲ್ಲ, ಈ ಗ್ರಾಮೀಣ ವ್ಯವಸ್ಥೆಯೊಳಗೆ ಶೌಚಾಲಯದ ಬಗ್ಗೆ ನಾವು ಮಾತನಾಡಿದಾಗ, ಶುದ್ಧ ನೀರಿನ ಬಗ್ಗೆ ಮಾತನಾಡಿದಾಗ, ಅಲ್ಲಿಗೆ ಬ್ರಾಡ್ ಬ್ಯಾಂಡ್ ವ್ಯವಸ್ಥೆ ಬಗ್ಗೆ ಮಾತನಾಡಿದಾಗ, ಕಂಪ್ಯೂಟರ್ ವ್ಯವಸ್ಥೆ ಬಗ್ಗೆ ಮಾತನಾಡಿದಾಗ, ಈ ರೀತಿ ಅನಿಸಿಕೆಗಳು ಹೊರಬರುತ್ತವೆ, ಆದರೆ ಆ ಚೀಟಿಯನ್ನು ಕಳುಹಿಸಿದವರಿಗೆ ನಾನು ಇಷ್ಟೇ ಕೇಳುತ್ತೇನೆ, ನೀರಿನ ಕೊರತೆ ಬಹಳ ಹಳ್ಳಿಗಳಲ್ಲಿ ಕಡಿಮೆಯಿದೆ, ನೀವು ಏರೋಪ್ಲೇನ್‌ನೊಳಗೆ ಶೌಚಾಲಯವನ್ನು ಉಪಯೋಗ ಮಾಡುತ್ತೀರಲ್ಲವೆ, ಆಗ ಅಲ್ಲಿಗೆ ನೀರು ನೀರನ್ನು ತೆಗೆದುಕೊಂಡು ಹೋಗಿರುತ್ತೀರಾ? ಅಲ್ಲಿ ವ್ಯಾಕ್ಯೂಮ್ ಪ್ರೆಷರ್ ಮೇಲೆ ಟಾಯ್ಲೆಟ್ಟ್ ಕ್ಲೀನ್ ಆಗುವುದಿಲ್ಲವೆ? ಆ ಟೆಕ್ನಾಲಜಿಯನ್ನು ನಮ್ಮ ಗ್ರಾಮೀಣ ಭಾಗಕ್ಕೆ ತೆಗೆದುಕೊಂಡು ಬನ್ನಿ ಎಂದು ಈ ಚೀಟಿಯನ್ನು ಕಳುಹಿಸಿದವರು ಇಂಥ ಸಲಹೆಗಳನ್ನೊಳಗೊಂಡ ಚೀಟಿಯನ್ನು ಏಕೆ ಕಳುಹಿಸಬಾರದು? ಇದು ನಮ್ಮ ಗುರಿಯಾಗಬೇಕು. ಈಗ ನೀರು ಅಲ್ಲಿ ಸಿಗುವುದಿಲ್ಲ, ಅದಕ್ಕಾಗಿ ಶೌಚಾಲಯವೇ ಬೇಡವೆಂದು ಹೇಳುವುದಕ್ಕಾಗುತ್ತದೆಯೇ? ಆ ಟೆಕ್ನಾಲಜಿಯನ್ನು ನಾವು ತರತಕ್ಕಂಥ ಪ್ರಯತ್ನವನ್ನು ಮಾಡಬೇಕಾಗಿರತಕ್ಕಂಥ ಅವಶ್ಯಕತೆಯಿದೆ.

ಶ್ರೀ ಸಿ.ಟಿ. ರವಿ:– ಖಂಡಿತ.

ಶ್ರೀ ಬಿ.ಆರ್. ಪಾಟೀಲ್:– ಈಗ ಮಾನ್ಯ ಮಂತ್ರಿಗಳೇನು ಆಲೋಚನೆಯನ್ನು ಮಾಡಿದ್ದಾರಲ್ಲಾ, ಈಗ ನೀರಿನ ಸಮಸ್ಯೆ ಇವತ್ತು ಗಂಭೀರವಾಗಿದೆ. ಅದನ್ನು ನಾವು ಒಪ್ಪುತ್ತೇವೆ. ಆದರೆ ಮೊನ್ನೆ ನಿಮ್ಮ ಕೃಷಿ

ಸಚಿವರು ಈ ಜಲಾಶಯನದ ಬಗ್ಗೆ ತುಟಿ ಬಿಚ್ಚಿ ಒಂದು ಮಾತನ್ನೂ ಕೂಡ ಹೇಳಲಿಲ್ಲ. ನೀವು ಅಮತರ್ಜಲವನ್ನು ಹೇಗೆ ಮಾಡುತ್ತೀರಿ?

**ಶ್ರೀ ಹೆಚ್.ಕೆ. ಪಾಟೀಲ್:–** ಈಗ ವಿಷಯವನ್ನು ಬೇರೆ ಕಡೆಗೆ ಡೈವರ್ಟ್ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಬಿ.ಆರ್. ಪಾಟೀಲ್:–** ವಿಷಯ ಒಂದಕ್ಕೊಂದು ಸಂಬಂಧವಿರುತ್ತದೆ. ಈಗ ground water recharge ಮಾಡುವುದಕ್ಕೆ ನಿಮ್ಮ ಪ್ಲಾನ್ ಇಲ್ಲವೇ ಇಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಹೆಚ್.ಕೆ. ಪಾಟೀಲರೆ, ನಿಮಗೆ ಆ ಇಚ್ಛಾಶಕ್ತಿ ಇದೆ. ಇಚ್ಛಾಶಕ್ತಿ ಪ್ರದರ್ಶನ ಮಾಡೋಣ. ಒಂದು ಬದಲಾವಣೆಯನ್ನು ತರಬೇಕೆಂದರೆ ಅದಕ್ಕೆ ಕೆಲವರು ಪ್ರತಿರೋಧ ಮಾಡುತ್ತಾರೆ, ಕೆಲವರು ಟೀಕೆ ಮಾಡುತ್ತಾರೆ, ಇವೆಲ್ಲವನ್ನೂ ಎದುರಿಸಿಯೇ ಒಂದು ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಒಂದು ಸಣ್ಣ ಬದಲಾವಣೆಯನ್ನು ಕೂಡ ಈ ಸಮಾಜದಲ್ಲಿ ತರುವುದಕ್ಕೆ ಆಗುವುದಿಲ್ಲ. ಈಗ ಒಂದು ಮೇಜನ್ನು ಈ ಬದಿಯಿಂದ ಆ ಬದಿಗೆ ಸರಿಸಬೇಕೆಂದರೂ ಕೂಡ ಟೀಕೆಗಳು ಬರುತ್ತವೆ. ಹೀಗಾಗಿ ಯಾರು ಏನು ಬೇಕಾದರೂ ಟೀಕೆಗಳನ್ನು ಮಾಡುವವರು ಮಾಡುತ್ತಿರಲಿ. ಆದರೆ ಈ ನಿಟ್ಟಿನಲ್ಲಿ ಒಂದು ಆಂದೋಳನದ ಸ್ವರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ನೀವೇನಾದರೂ ಒಂದು ಯೋಜನೆಯನ್ನು ಮಾಡಿ. ನಾವೆಲ್ಲರೂ ಪೂರ್ಣ ಪ್ರಮಾಣದಲ್ಲಿ ಅದಕ್ಕೆ ತೊಡಗಿಸಿಕೊಳ್ಳುತ್ತೇವೆ. ಕೇವಲ ಇಲ್ಲಿ ಭಾಷಣ ಮಾಡುವುದಿಲ್ಲ, ನಾವು ನಮ್ಮ ನಮ್ಮ ಕ್ಷೇತ್ರದ ಹಂತದಲ್ಲಿ, ನಮ್ಮ ಜಿಲ್ಲೆಯ ಹಂತದಲ್ಲಿ ಅದು ಅನುಷ್ಠಾನವಾಗುವುದಕ್ಕೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುತ್ತೇವೆ. ನಮ್ಮ ಸುತ್ತಮುತ್ತಲಿರುವ ಸಾರ್ವಜನಿಕ ಸಂಘ ಸಂಸ್ಥೆಗಳನ್ನೂ ಕೂಡ ಇದರಲ್ಲಿ ತೊಡಗಿಸುವಂಥ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದಕ್ಕೆ ಶಾಸನದ ಬದ್ಧತೆಯನ್ನು ಕೂಡ ಜೋಡಿಸಿದರೆ ಉತ್ತಮ. ನಾನು ಈಗಾಗಲೇ ಹೇಳಿದೆನಲ್ಲ, ಬಿ.ಪಿ.ಎಲ್. ಕಾರ್ಡ್ ರದ್ದು ಮಾಡುವಂಥ ನಿಯಮವನ್ನು ಶಾಸನದಲ್ಲಿ ಜೋಡಿಸಿದರೆ

ಶೇಕಡ ನೂರರಷ್ಟು ಇದು ಇಂಪ್ಲಿಮೆಂಟ್ ಆಗುತ್ತದೆ. ಅವರಿಗೆ ಭಯ ಕೂಡ ಇರಬೇಕು. ಅವರಿಗೆ ಕಟ್ಟದಿದ್ದರೆ ಆಗುವುದಿಲ್ಲವೆನ್ನುವ ಭಯ ಇದ್ದರೆ ಖಂಡಿತ ಕಟ್ಟುತ್ತಾರೆ ನಿರ್ಮಾಣ ಆಗೇ ಆಗುತ್ತದೆ. ಆ ನಿಟ್ಟಿನಲ್ಲಿ ಒಂದಿಷ್ಟು ಚಿಂತನೆಯನ್ನು ಮಾಡೋಣ. ಇನ್ನು ಗ್ರಾಮ ಪಂಚಾಯಿತಿ ಆಸ್ತಿ ರಕ್ಷಣೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೆ. ನಮ್ಮ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆ ಗ್ರಾಮದ ಆಸ್ತಿಯ ವಿವರ ಮತ್ತು ಅದನ್ನು ರಕ್ಷಣೆ ಮಾಡುವಂತಹ ವ್ಯವಸ್ಥೆಯಾಗಬೇಕು. ಬೆಂಗಳೂರು ಸುತ್ತಮುತ್ತ ಆಸ್ತಿಗಳಿಗೆ ಕೋಟ್ಯಂತರ ರೂಪಾಯಿ ಬೆಲೆ ಇದೆ. ಜಿಲ್ಲಾ ಕೇಂದ್ರ ಮತ್ತು ನಗರ ಪ್ರದೇಶದ ಅಕ್ಕಪಕ್ಕ ಇರುವಂತಹ ಗ್ರಾಮ ಪಂಚಾಯಿತಿಯ ಪ್ರಧಾನರಾಗುವುದಕ್ಕೆ ಕೋಟಿಗಟ್ಟಲೆ ಖರ್ಚು ಮಾಡುತ್ತಾರೆ. ಎಂ.ಎಲ್.ಎ ಗಿರಿಗೂ ಅಷ್ಟು ಕಿಮ್ಮತ್ತಿಲ್ಲ. ಎಂ.ಎಲ್.ಎ.ಗಿರಿಗಿಂತ ಜಾಸ್ತಿ ಕಿಮ್ಮತ್ತಿದೆ. ಏಕೆಂದರೆ ಪಂಚಾಯಿತಿ ಅಧ್ಯಕ್ಷರಾಗಿ ಖಾತೆ ಸ್ಕೀಮ್ ಮಾಡಿದರೆ ಕೋಟ್ಯಂತರ ರೂಪಾಯಿ ಬರುತ್ತದೆ. ಸುತ್ತಮತ್ತವಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗುವುದು ಎಂದರೆ ಮೆಂಬರ್‌ಗಳನ್ನು ಫಾರಿನ್ ಟೂರ್‌ಗೆ ಕರೆದುಕೊಂಡು ಹೋಗುತ್ತಾರೆ. ಬೇರೆಯವರಾದರೆ ಬಸವಕಲ್ಯಾಣಕ್ಕೋ ಧರ್ಮಸ್ಥಳಕ್ಕೋ ಕರೆದುಕೊಂಡು ಹೋದರೆ, ಸುತ್ತಮುತ್ತವಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗುವವರು ಫಾರಿನ್ ಟೂರ್‌ಗೆ ಕರೆದುಕೊಂಡು ಹೋಗಿ ಅಧ್ಯಕ್ಷರಾಗುತ್ತಾರೆ.

**ಶ್ರೀ ಡಿ.ಎನ್. ಜೀವರಾಜ್:**– ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಪಂಚಾಯಿತಿ ಆಸ್ತಿಯನ್ನು ಕಾಪಾಡಬೇಕೆಂದು ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ಹೇಳಿದರು. ಇದರ ವಿಚಾರ ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೇನೆ, ಬರದಿದ್ದರೆ ತಮ್ಮ ಮಾಹಿತಿಗಾಗಿ ಹೇಳುವುದೇನೆಂದರೆ ನನ್ನ ಕ್ಷೇತ್ರದಲ್ಲಿ ಒಂದು ಗ್ರಾಮ ಪಂಚಾಯಿತಿ ಇದೆ. ಆ ಪಂಚಾಯಿತಿ ಜಾಗದಲ್ಲಿ ಯಾರೋ ಪ್ರೈವೇಟ್‌ನವರು ಮನೆ ಕಟ್ಟಿದರು ಎಂದು ಪಿಡಿಓ ಪೊಲೀಸರನ್ನು ಕರೆದುಕೊಂಡು ಹೋಗಿ ಅವರನ್ನು ಇಟ್ಟುಕೊಂಡು ಆ ಮನೆಯನ್ನು ಕೀಳಿಸುವ ಪ್ರಯತ್ನವನ್ನು ಮಾಡುತ್ತಾರೆ. ಮಾರನೇ ದಿನ ಆ ಪಿಡಿಓ ಮೇಲೆ ಒಂದು ಕೇಸ್ ಬುಕ್ ಆಗುತ್ತದೆ. ಅದೇನೆಂದರೆ ಆ

ಮನೆಯನ್ನು ಖಾಲಿ ಮಾಡಿಸಬೇಕಾದರೆ ಮನೆಯ ಹೆಂಗಸಿನ ಮೈ ಮುಟ್ಟಿದ ಎಂದು ಪಿಡಿಓ ಮೇಲೆ ಕೇಸ್ ಬುಕ್ ಮಾಡಿ ಕೇಸ್ ರಿಜಿಸ್ಟರ್ ಆಗಿದೆ. ಇದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಸರ್ಕಾರದ ಆಸ್ತಿಯನ್ನು ಕಾಪಾಡುವುದಕ್ಕೆ ಹೋದವನ ಮೇಲೆ ಹೆಂಡತಿಯನ್ನು ಹಿಡಿದುಕೊಂಡ ಎಂದು ದೂರು ಕೊಟ್ಟರೆ ಆ ಪಿಡಿಓ ರಕ್ಷಣೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಇದು ತಮ್ಮ ಗಮನಕ್ಕೆ ಬರದಿದ್ದರೆ ಇದರ ಬಗ್ಗೆ ತಾವು ನೋಡಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಉಪಾಧ್ಯಕ್ಷರೆ, ಶೃಂಗೇರಿಯಲ್ಲಿ ಈ ರೀತಿ ವ್ಯತಿರಿಕ್ತವಾದ ಕೇಸ್. ಬಹಳ ಕಡೆಹಳ್ಳಿ ಪಿಡಿಓ ಮತ್ತು ಅಧ್ಯಕ್ಷರು ಒಟ್ಟಿಗೆ ಸೇರಿ ಲಪಟಾಯಿಸಿಬಿಡುತ್ತಾರೆ. ಹಾಗಾಗಿ ಬಹಳ ಕಡೆಗಳಲ್ಲಿ ಈ ಪ್ರಶ್ನೆ ಬರುವುದಿಲ್ಲ. ಇವರಿಬ್ಬರೂ ಸೇರಿ ಆಸ್ತಿ ಹೊಡೆಯುತ್ತಾನೆಂದು ಯಾರಾದರೂ ತಡೆಯುವುದಕ್ಕೆ ಹೋಗುತ್ತಾರಲ್ಲ, ಅವನನ್ನು ಎಲ್ಲೋ ಒಂದು ಕಡೆ ಲಾರಿ ಹತ್ತಿಸಿ ಮರ್ಡರ್ ಮಾಡುವುದು, ಅವನ ಮನೆಗೆ ನುಗ್ಗಿ ಗಲಾಟೆ ಮಾಡುವುದು ನಡೆಯುತ್ತದೆಯೇ ಹೊರತು 99% ನಿಮ್ಮ ಶೃಂಗೇರಿ ಕಡೆಯಲ್ಲಿ ಆಗಿರುವಂತಹ ಕೇಸುಗಳು ಅಪರೂಪ ಇರಬಹುದು.

**ಶ್ರೀ ಡಿ.ಎನ್. ಜೀವರಾಜ್:–** ನಾನು ಹೇಳಿದ್ದು, ನೀವು ಹೇಳಿದ್ದು, ಒಂದೇ ವಿಚಾರ. ಆದರೆ ನೀವು ಸ್ವಲ್ಪ confuse ಮಾಡಿಕೊಂಡಿರಿ. ನಮ್ಮ ಅಧಿಕಾರ ಬಹಳ ಪ್ರಾಮಾಣಿಕ ಇದ್ದ, ಹಾಗಾಗಿ ಅವನ ಮೇಲೆ ಕೇಸ್ ಹಾಕಿಸಿಕೊಂಡ. ಪ್ರಾಮಾಣಿಕ ಅಧಿಕಾರಿಗೂ ರಕ್ಷಣೆ ಕೊಟ್ಟರೆ ಮಾತ್ರ ಮಾನ್ಯ ರವಿಯವರು ಹೇಳಿದ ಹಾಗೆ ಸರ್ಕಾರಿ ಪಂಚಾಯಿತಿ ಆಸ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ಆಗುತ್ತದೆ.

**ಶ್ರೀ ಸಿ.ಟಿ. ರವಿ:–** ಬಹಳ ಕಡೆಗಳಲ್ಲಿ ರಕ್ಷಕರೇ ಭಕ್ಷಕರಾಗಿದ್ದಾರೆ. ಹಾಗಾಗಿ ಆ ಭಕ್ಷಕರನ್ನು ಶಿಕ್ಷಿಸುವಂತಹ ವ್ಯವಸ್ಥೆಯಾಗಬೇಕು. ಆ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ನಗರದ ಸುತ್ತಮುತ್ತವಿರುವಂತಹ ಎಲ್ಲಾ ಪಂಚಾಯಿತಿ ಆಸ್ತಿಗಳನ್ನು ಕ್ರೂಢೀಕರಿಸಿ online ನಲ್ಲಿ centralize ಆಗಿ upload ಮಾಡುವಂತಹ ಕೆಲಸವಾಗಬೇಕು. ಇಲ್ಲದಿದ್ದರೆ ಅಲ್ಲಿರುವಂತಹ ಆಸ್ತಿ

ರಿಜಿಸ್ಟರ್‌ನ್ನೇ ಕಳೆದು ಹಾಕುವಂತಹ, ಬದಲಾಯಿಸಿ ಬರೆಯುಬಿಡುವಂತಹ ವ್ಯವಸ್ಥೆಯಾಗಿ ಬಿಡುತ್ತದೆ. ಆ ರೀತಿ ಆಗಬಾರದು ಎಂದರೆ ಅವೆಲ್ಲವನ್ನೂ ಕೂಡ ಕೇಂದ್ರೀಕರಿಸಿ ಮೊದಲ ಹಂತದಲ್ಲಿ ನೀವು ಮಾಡಬೇಕಾಗಿರುವುದು ಯಾವ್ಯಾವುದು ಬೆಂಗಳೂರು ನಗರ ಸುತ್ತಮುತ್ತ ಇದೆ, ಆ ಪ್ರದೇಶದಲ್ಲಿರುವ ಪಂಚಾಯತ್ ಆಸ್ತಿಯ ರಕ್ಷಣೆ ಕಡೆಗೆ ವಿಶೇಷ ಗಮನವನ್ನು ಹರಿಸಬೇಕು.

**ಉಪಾಧ್ಯಕ್ಷರು:**– ರವಿಯವರೆ, more than one hour ಆಯಿತು, ತಾವು conclude ಮಾಡಬೇಕು.

**ಶ್ರೀ ಸಿ.ಟಿ. ರವಿ:**– ತಾವು ಗ್ರಾಮ ವಿಕಾಸ ಯೋಜನೆಯನ್ನು ಬಜೆಟ್‌ನಲ್ಲಿ ಹೇಳಿದಿರಿ. ಗ್ರಾಮ ವಿಕಾಸ ಯೋಜನೆಯಲ್ಲಿ ಒಂದು ಕ್ಷೇತ್ರಕ್ಕೆ ಐದು ಗ್ರಾಮ ಕೊಡುತ್ತೇವೆಂದು ಹೇಳಿದಿರಿ. ಗ್ರಾಮ ವಿಕಾಸ ಯೋಜನೆ ಯಾವಾಗ ಅನುಷ್ಠಾನವಾಗುತ್ತದೆ? ಈ ಯೋಜನೆಗೆ ಎಷ್ಟು ಅನುದಾನ ಇಟ್ಟಿದ್ದೀರಿ? ಸುವರ್ಣ ಗ್ರಾಮದ ಹೆಸರು ಬದಲಾಯಿಸಿದ್ದೀರೋ ಅಥವಾ ಸುವರ್ಣ ಗ್ರಾಮ ಯೋಜನೆಯನ್ನು ಕೊಟ್ಟು, ಗ್ರಾಮ ವಿಕಾಸ ಯೋಜನೆಯನ್ನು ಕೊಡುತ್ತೀರೋ? ಸುವರ್ಣ ಗ್ರಾಮ ಯೋಜನೆಯನ್ನು ಕೊಟ್ಟು ಗ್ರಾಮ ವಿಕಾಸ ಯೋಜನೆಯನ್ನು ಕೊಡುತ್ತೇವೆಂದು ಹೇಳಿದರೆ, ಅದನ್ನು ಸದನದ ಪರವಾಗಿ ಸಮಭ್ರಮದಿಂದ ಸ್ವಾಗತಿಸುತ್ತೇನೆ. ಆದರೆ ಸುವರ್ಣ ಗ್ರಾಮಕ್ಕೆ ನೀವು ಅನುದಾನ ಕೊಡಲಿಲ್ಲ. ಅದು ಒಳ್ಳೆಯ ಯೋಜನೆ. ಈ ಹಿಂದೆ ಘೋಷಣೆಯಾಗಿ ಕೈಗೆತ್ತಿಕೊಂಡಂತಹ ಯೋಜನೆಗಳು ಕೂಡ ಅನುದಾನದ ಲಭ್ಯತೆಯ ಕಾರಣದಿಂದ ನೆನೆಗುದಿಗೆ ಬಿದ್ದಿವೆ. ಅದಕ್ಕೂ ಹಣ ಬಿಡುಗಡೆಯಾಗಿಲ್ಲ. ಆ ದೃಷ್ಟಿಯಿಂದ ನೀವು ಸುವರ್ಣ ಗ್ರಾಮ ಯೋಜನೆಯನ್ನು ಮುಂದುವರೆಸಿ, ನಿಮ್ಮ ಕಲ್ಪನೆಯ ಗ್ರಾಮ ವಿಕಾಸ ಯೋಜನೆಯನ್ನು ಕೊಡಿ ಎನ್ನುವ ಆಗ್ರಹವನ್ನು ಮಾಡುವುದಕ್ಕೆ ನಾನು ಬಯಸುತ್ತೇನೆ.

ಇನ್ನೊಂದು ಎಚ್ಚರಿಕೆ ವಹಿಸಬೇಕಾಗಿರುವುದು ಎಂದರೆ ಎಲ್ಲಾ ಗ್ರಾಮಗಳಲ್ಲಿ ಇತ್ತೀಚೆಗೆ overhead tankಗಳನ್ನು ಕಟ್ಟುತ್ತಿದ್ದಾರೆ. ವಾಸ್ತವಿಕ ಸ್ಥಿತಿ ಏನೆಂದರೆ ಸಿಸ್ಪಂಗಳಿಗೆ ನೀರಿಲ್ಲ. ನಾವು ನೇರವಾಗಿ ನೀರು ಕೊಡುವುದಕ್ಕೆ

ಸಾಧ್ಯವಾಗದಿರುವಂತಹ ಸಂದರ್ಭದಲ್ಲಿ ಕರೆಂಟ್ ಬಂದರೆ ಒಂದೆರಡು ಮೂರು ಗಂಟೆ ಇರುತ್ತದೆ. ಕರೆಂಟ್ ಇರುವ ಕಡೆಗಳಲ್ಲಿ ಸೋರ್ಸ್ ಕಡಿಮೆ ಇರುತ್ತದೆ. Overhead tank ಕಟ್ಟುತ್ತೇವೆ, ಆ ಟ್ಯಾಂಕ್‌ಗೆ ಒಂದು ದಿನವೂ ನೀರು ತುಂಬಿಸುವುದಕ್ಕೆ ಸಾಧ್ಯ ಆಗದಿರುವಂತಹ ಸ್ಥಿತಿ ಶೇಕಡ 70ರಷ್ಟು ಗ್ರಾಮಗಳಲ್ಲಿ ಇದೆ. ನಾನು ಮಲೆನಾಡಿನಿಂದ ಬಂದಿರುವವನು, ನಮ್ಮ ಭಾಗದ ಪರಿಸ್ಥಿತಿನೇ overhead tankಗೆ ನೀರು ತುಂಬಿಸಿ ನೀರು ಕೊಡುವ ಸ್ಥಿತಿಯಲಿಲ್ಲ. Source ಇದ್ದರೆ power problem, power ಇದ್ದರೆ source problem. ಈ ಎರಡೂ ಸರಿಯಿದ್ದರೆ ನೀರು ಬಿಡುವವನೇ problem ಆಗಿ ಇರುತ್ತಾರೆ. ಅವನನ್ನು ಕೇಳಿದರೆ ಐದಾರು ತಿಂಗಳಿನಿಂದ ನನಗೆ ಸಂಬಳವೇ ಬಂದಿಲ್ಲ, ನೀವು ಯಾರ ಕೈಲಾದರೂ ನೀರು ಬಿಡಿಸಿಕೊಳ್ಳಿ ಎಂದು ಹೇಳುತ್ತಾನೆ. ಇದು ಈಗ ಇರುವಂತಹ ಸ್ಥಿತಿ. ಹಾಗಾಗಿ overhead tank ಕಟ್ಟುವುದಕ್ಕೆ ಮುಂಚೆ ಅದೊಂದು contractor ಕೇಂದ್ರಿತ ಯೋಜನೆ ಆಗಬಾರದು ಎಂದರೆ; ಅಲ್ಲಿನ sourceನ ಲಭ್ಯತೆ, ಇದನ್ನು ಆಧರಿಸಿಯೇ overhead tank ಕೊಡಬೇಕು. ಇಲ್ಲದಿದ್ದರೆ ಸರ್ಕಾರದ ಹಣ ದುರ್ವಿನಿಯೋಗವಾಗುತ್ತದೆ. ಇದು ದುರ್ವಿನಿಯೋಗವಾಗದ ರೀತಿಯಲ್ಲಿ ಯೋಚಿಸಬೇಕು.

ಇನ್ನು ಜೀತ ವಿಮುಕ್ತ ಪುನರ್‌ವಸತಿ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದು 1978ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಯೋಜನೆ. ಜೀತ ವಿಮುಕ್ತಿಯನ್ನಾಗಿ ಮಾಡುವುದಕ್ಕೆ ಯೋಜನೆಯನ್ನು ರೂಪಿಸಿ, ಯಾರಾದರೂ ಜೀತಕ್ಕೆ ಇಟ್ಟುಕೊಂಡರೆ ಅಪರಾಧವೆಂದು ಪರಿಗಣಿಸಿ, ಕ್ರಿಮಿನಲ್ ಕೇಸ್ ಆಗುವಂತ ಒಂದು ಯೋಜನೆ ಬಂದಿತ್ತು. ಬಹಳ ದುರ್ದೈವದ ಸಂಗತಿ ಎಂದರೆ ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಜೀತದಾಳುಗಳ ಪ್ರಕರಣಗಳು ಇವೆ. ಮಾನ್ಯ ಮುಖ್ಯಮಂತ್ರಿಗಳು ಮೈಸೂರು ಜಿಲ್ಲೆಯವರು, ಸಾಮಾಜಿಕ ಹೋರಾಟದ ಹಿನ್ನೆಲೆಯಿಂದ ಬಂದಂಥವರು. ತುಮಕೂರು ಮತ್ತು ಮೈಸೂರು ಜಿಲ್ಲೆಯಲ್ಲಿ 2013ನೇ ಇಸವಿಯಲ್ಲಿ ಅತ್ಯಂತ ಹೆಚ್ಚು ಜೀತದ ಪ್ರಕರಣ ಪತ್ತೆಯಾಗಿವೆ. ಮೈಸೂರು ಜಿಲ್ಲೆಯಲ್ಲಿ 253 ಪ್ರಕರಣಗಳಲ್ಲಾದರೆ ತುಮಕೂರು ಜಿಲ್ಲೆಯಲ್ಲಿ

845 ಪ್ರಕರಣಗಳು ಆಗಿವೆ. ಇಲ್ಲಿಗೆ 37 ವರ್ಷಗಳ ಹಿಂದೆ ತಂದಂತಹ ಯೋಜನೆ ಇದ್ದರೂ ಜೀತದಾಳುಗಳು ಪ್ರಕಟವಾಗುತ್ತಾರೆ ಎಂದರೆ ಇದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಬೇಕು ಮತ್ತು ಜೀತಕ್ಕೆ ಅವಕಾಶವಿಲ್ಲದಿರುವ ರೀತಿಯಲ್ಲಿ ನೋಡಿಕೊಳ್ಳಬೇಕು. ಹೊಸ ರೀತಿಯ ಜೀತದ ವ್ಯವಸ್ಥೆ ತಲೆಯೆತ್ತಿದೆ. ಈಗ ನಾವು contract labourers ಎಂದು ಮಾಡಿಕೊಳ್ಳುತ್ತೇವಲ್ಲ, ಇದೊಂದು ರೀತಿ ಸರ್ಕಾರಿ ಕೇಂದ್ರಿತ ಜೀತದ ವ್ಯವಸ್ಥೆ. ನಾವು ಖಾಸಗಿ ಜೀತವನ್ನು ಹೇಗೆ ನಿಯಂತ್ರಿಸುತ್ತೇವೋ ಹಾಗೆ ಸರ್ಕಾರಿ ಕೇಂದ್ರಿತ ಜೀತದ ವ್ಯವಸ್ಥೆಯನ್ನು ನಿಯಂತ್ರಿಸಬೇಕು. ಸರ್ಕಾರ ಯಾರಿಗೋ ಟೆಂಡರ್‌ನಲ್ಲಿ ಒಂದು lump-sum amount ಕೊಡುತ್ತದೆ, ಅವನು ಅಲ್ಲಿ ಶೋಷಣೆ ಮಾಡುತ್ತಾನೆ. ನೀವು ಎಂಟು ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದರೆ, ಅವನು ಮೂರ್ನಾಲ್ಕು ಸಾವಿರ ರೂಪಾಯಿ ಕೊಟ್ಟು ಶೋಷಣೆ ಮಾಡುತ್ತಾನೆ. ಸರ್ಕಾರಿ ಕೇಂದ್ರಿತ ಜೀತದ ವ್ಯವಸ್ಥೆಯನ್ನು ನಿಲ್ಲಿಸಬೇಕು ಹಾಗೂ ಈ ರೀತಿ ಜೀತದ ಪ್ರಕರಣಗಳಿಗೂ ಅಂತ್ಯ ಹಾಡಬೇಕೆಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತೇನೆ.

ಇನ್ನೂ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ, ವಿಚಾರ ಎರಡು ಲಕ್ಷ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವ ಸಲುವಾಗಿ 2013–14ನೇ ಸಾಲಿನಲ್ಲಿ ಪ್ರಾರಂಭಿಸುವುದಾಗಿ ಘೋಷಿಸಿದ್ದೀರಿ. ಅದರ ಅನುಷ್ಠಾನ ಏನಾಗಿದೆ? ನೀವು 50 ಲಕ್ಷ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ. ಅದಕ್ಕೆ ಅನುದಾನ ಬಿಡುಗಡೆ ಮಾಡಿದ ತಕ್ಷಣ ಯೋಜನೆ ಅನುಷ್ಠಾನ ವಾಗುವುದಿಲ್ಲ. ನಿಮಗೆ ಸಮಾಧಾನವಾಗಬಹುದು. 105 ಕೋಟಿ ರೂಪಾಯಿ ಯೋಜನೆಗೆ 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದ ತಕ್ಷಣ ಹಣ ಬಿಡುಗಡೆ ಮಾಡಿಸಿದ್ದೇನೆ ಎಂದು ಸಮಾಧಾನ ವಾಗಬಹುದು. ಅದರ ಅನುಷ್ಠಾನ ಸಮರ್ಪಕವಾಗಿ ಆಗಿಲ್ಲ. 105 ಕೋಟಿ ರೂಪಾಯಿ ಅನುದಾನದಲ್ಲಿ 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದರೆ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ ಪತ್ರಿಕಾ ಪ್ರಕಟಣೆಗೆ ಅನುಕೂಲವಾಗಬಹುದೇ ಹೊರತು ಯಾರನ್ನು ಯಾರು ಚೈತನ್ಯ ಮಾಡುವುದು, ಯೋಜನೆ ಚೈತನ್ಯ

ಮಾಡುತ್ತದೋ, ಹೆಸರು ಚೈತನ್ಯ ಮಾಡುತ್ತದೋ, ಅದು ಅನುಷ್ಠಾನವಾಗದಿದ್ದರೆ ಯೋಜನೆಯ ಅರ್ಥವೇನು? ಹಾಗಾಗಿ ತಮ್ಮ ಅವಧಿಯಲ್ಲಿ ಈ ರೀತಿ ಕೇವಲ ಪ್ರಕಟಣೆಯ, ಪತ್ರಿಕಾ ಹೇಳಿಕೆಯ ಮತ್ತು ಪ್ರಚಾರದ ಯೋಜನೆಗಳು ಆಗಬಾರದು. ಆ ರೀತಿ ಆಗಬಾರದು ಎಂದರೆ ಅನುಷ್ಠಾನದ ಕಡೆಗೆ ಮತ್ತು ಅಗತ್ಯವಿರುವಂತಹ ಅನುದಾನವನ್ನು ಒದಗಿಸುವ ಕಡೆಗೆ ಗಮನ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು Hydro-fracturing ಮಾಡಿಸುತ್ತಿದ್ದೀರಿ, ನಿಮ್ಮ ಲೆಕ್ಕದಲ್ಲಿ Hydro fracture ಗೆ ಒಳ್ಳೆಯ result ಇದೆ, ಅಂದರೆ ನಿಮಗೆ 91%ರಷ್ಟು ಸಫಲತೆ ದೊರಕಿದೆಯೆಂದು ಹೇಳಿದ್ದೀರಿ, ಇದಕ್ಕಿಂತ ಮೋಸದ ಸುಳ್ಳು ವರದಿ ಇನ್ನೊಂದು ಇಲ್ಲ. ಇವರು ಎಷ್ಟು ಸುಳ್ಳು ಹೇಳುತ್ತಾರೆಂದರೆ, Hydro-fracturing ನಲ್ಲಿ ಶೇ. 91ರಷ್ಟು ಸಫಲತೆ ದೊರಕಿದೆಯೆಂದು ಹೇಳುತ್ತಾರೆ. ನಿಮಗೆ hydro-fracturing ನಲ್ಲಿ ಶೇ.91ರಷ್ಟು ಸಫಲತೆ ದೊರಕಿದ್ದರೆ, ಹೊಸ ಬೋರ್‌ವೆಲ್‌ಗಳನ್ನು ಏಕೆ ಕೊರೆಯತ್ತೀರಿ? ತಾವು ಲಕ್ಷಾಂತರ ಹೊಸ ಬೋರ್‌ವೆಲ್‌ಗಳನ್ನು ಕೊರೆದಿದ್ದೀರಿ. ಇಲ್ಲಿ 91%ರಷ್ಟು ಸಫಲತೆ ದೊರಕಿರುವುದು ನಿಜವಾಗಿದ್ದರೆ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವ ಅವಶ್ಯಕತೆ ಏನಿತ್ತು? ಹೊಸ ಬೋರ್‌ವೆಲ್‌ಗಳನ್ನು ಎಷ್ಟು ಹೆಚ್ಚಿಗೆ ಕೊರೆದಿದ್ದೀರೋ, ಅದೇ hydro-fracturing ವಿಫಲವಾಗಿದೆಯೆಂದು ಹೇಳುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಉಪಾಧ್ಯಕ್ಷರೆ, Hydro-fracturing ಮಾಡಿಸಬೇಕಾದರೆ they will also analyze, whether hydro-fracturing is going to be successful. ಅಲ್ಲಿ ಮಾತ್ರ Hydro-fracturing ಮಾಡುವುದಕ್ಕೆ ತಮ್ಮ ಒಲವನ್ನು ತೋರಿಸುತ್ತಾರೆ. ಯಾವುವು Hydro-fracturing ನಿಂದ ನೀರನ್ನು ಮತ್ತೆ ಪುನರುಜ್ಜೀವನ ಮಾಡುವುದಕ್ಕೆ ಸಾಧ್ಯವೋ? ಅವುಗಳನ್ನು ಗಮನಿಸಿಕೊಂಡೇ hydro-fracturing ಮಾಡಬೇಕು. ಎಲ್ಲಾ ಬತ್ತಿರುವಂಥ ಬೋರ್‌ವೆಲ್‌ಗಳಿಗೆ hydro-fracturing ಮಾಡಿದರೆ ಸಫಲತೆ ಬರುವುದೇ ಇಲ್ಲ.

ಶ್ರೀ ಸಿ.ಟಿ. ರವಿ:– ಆದರೂ 91% result doubt case, ತಾವು ಬೇಕಾದರೆ ಒಂದು cross verification ಮಾಡಿಸಿ, ಈ 91% result doubt case.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ರವಿಯವರೆ, ಮಾನ್ಯ ಮಂತ್ರಿಯವರು ಏನು ಹೇಳಿದ್ದಾರೆ? ಈಗ ಬೋರ್‌ವೆಲ್‌ಗಳಲ್ಲಿ ನೀರಿಲ್ಲ, ಅಲ್ಲಿ hydro-fracturing flushing ಮಾಡಿದರೆ ಏನು ಬರುತ್ತದೆ? ಸುಮ್ಮನೇ ದುಡ್ಡು ಹೊಡೆಯುವುದಕ್ಕೆ ಮಾಡುವುದು, ಪ್ರಯೋಜನವಾಗುವುದಿಲ್ಲ. ಎಲ್ಲಿ ನೀರಿದ್ದೂ ಕೂಡ ಒಳಗೆ ಒಂದೊಂದು ಸಾರಿ ಗಿಡದ ಸಣ್ಣ ಬೇರುಗಳು ಬಂದಿರುತ್ತವೆ, ಒಂಡು ಬಂದಿರುತ್ತದೆ, ಅಂಥದ್ದನ್ನು flush ಮಾಡಿ, ಪುನಃಚ್ಚೇತನಗೊಳಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಇವತ್ತು ನೂರಕ್ಕೆ ತೊಂಭತ್ತರಷ್ಟು ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಹಾಗಾಗಿ ಇದರ ಬಗ್ಗೆ ಪರ್ಯಾಯವಾಗಿ ಮಾನ್ಯ ಮಂತ್ರಿಯವರು ಯೋಚನೆ ಮಾಡಬೇಕು.

ಶ್ರೀ ಸಿ.ಟಿ. ರವಿ:– ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ವಿಷಯವೇನೆಂದರೆ, ಮಕ್ಕಳು ಬೋರ್‌ವೆಲ್‌ಗಳಿಗೆ ಬಿಳುವುದು, ಮಕ್ಕಳನ್ನು ಆತ್ಮಾಹುತಿ ತೆಗೆದುಕೊಳ್ಳುವಂಥ ತೆರೆದ ಬೋರ್‌ವೆಲ್‌ಗಳು ಇವೆ. ಹಿಂದೆ ನಾವು ಚಿಕ್ಕ ಹುಡುಗರು ಇದ್ದಾಗ ಅಲ್ಲಿ ಏಳು ಮಕ್ಕಳ ಚೌಡಿ ಇದೆ, ಅದು ಮಕ್ಕಳನ್ನು ತಿಂದು ಬಿಡುತ್ತದೆ. ಅಲ್ಲಿಗೆ ಹೋಗಬೇಡವೆಂದು ಹೇಳುತ್ತಿದ್ದರು. ನಮಗೆ ಆಗ ಹೇಳುತ್ತಿದ್ದ ಏಳು ಮಕ್ಕಳ ಚೌಡಿ ಮಕ್ಕಳನ್ನು ತಿನ್ನಲಿಲ್ಲ. ಆದರೆ ತೆರೆದ ಬೋರ್‌ವೆಲ್‌ಗಳನ್ನು ತೆರೆದಿಟ್ಟು, ಅದನ್ನು close ಮಾಡದೇ, ಅವುಗಳು ಮಕ್ಕಳನ್ನು ತಿನ್ನುತ್ತಿವೆ. ಅದಕ್ಕೆ ಮಕ್ಕಳು ಬಿದ್ದಾಗ ಅದು ಒಂದು ದೊಡ್ಡ ಸುದ್ದಿ, ನಾಲ್ಕು ದಿವಸ ಚರ್ಚೆ ವಿಷಯ, ಆಮೇಲೆ ಅದು ಒಂದು ಚರ್ಚೆಯ ವಿಷಯವಲ್ಲ, ಮರೆತು ಬಿಡುತ್ತೇವೆ. ಹಾಗಾಗಿ ಯಾವ್ಯಾವ ಪಂಚಾಯತ್‌ಗಳಲ್ಲಿ ಈ ರೀತಿ ಬೋರ್‌ವೆಲ್‌ಗಳನ್ನು ಕೊರೆದು open ಆಗಿ ಬಿಟ್ಟಿದೆ, ಆ ನಿಟ್ಟಿನಲ್ಲಿ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು. ಆಯಾ ಭಾಗಗಳ ಪಿ.ಡಿ.ಓ. ಗಳನ್ನು, ownerಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ಇವುಗಳನ್ನು ತಕ್ಷಣ close ಮಾಡಿಸುವಂಥ ಕೆಲಸವಾಗಬೇಕು, ಇಲ್ಲದಿದ್ದರೆ ಇನ್ನೂ ಎಷ್ಟು ಮಕ್ಕಳನ್ನು ಬಲಿ

ತೆಗೆದುಕೊಳ್ಳುತ್ತದೋ ಗೊತ್ತಿಲ್ಲ? ಆ ನಿಟ್ಟಿನಲ್ಲಿ ಯೋಚಿಸಬೇಕಾದಂಥ ಅವಶ್ಯಕತೆ ಇದೆ. ಇನ್ನು ನಮ್ಮ ತಾಲ್ಲೂಕು ಪಂಚಾಯತ್‌ಗಳಲ್ಲಿ 20 ವರ್ಷಗಳಿಂದ ಅಲ್ಲಿ promotion ಅನ್ನು ತೆಗೆದುಕೊಂಡಿರುವವರು ಅಲ್ಲೇ ಇದ್ದಾರೆ. ಅವರು ಎಷ್ಟು ಪ್ರಭಾವಶಾಲಿಗಳೆಂದರೆ ನನಗಿಂತ ಪ್ರಭಾವಶಾಲಿಗಳಾಗಿದ್ದಾರೆ. ಅವರು 20 ವರ್ಷಗಳಿಂದಲೂ ಅಲ್ಲೇ ಇದ್ದಾರೆ, ಇದು ನಮ್ಮ ತಾಲ್ಲೂಕು ಪಂಚಾಯತ್ ಕಥೆ ಮಾತ್ರವಲ್ಲ, ಬೇರೆ ಬೇರೆ ತಾಲ್ಲೂಕು ಪಂಚಾಯತ್‌ಗಳಲ್ಲೂ ಕೂಡ ಇದೇ ಕಥೆ ಇರಬಹುದು. ಆ ರೀತಿ ಇರಬಾರದೆಂದರೆ ಅವರೆಲ್ಲರೂ ಅಲ್ಲೇ ಬೇರು ಹಿಡಿದು, ಜಡ್ಡು ಹಿಡಿದಿರುವಂಥ ಒಂದು ಭ್ರಷ್ಟ ವ್ಯವಸ್ಥೆಯನ್ನು ಪೋಷಣೆ ಮಾಡಿರುತ್ತಾರೆ. ಅವರು ಎಲ್ಲರಿಗೂ ಪಾಠ ಹೇಳುವ ಮೇಷ್ಟ್ರು ಅವರೇ ಆಗಿರುತ್ತಾರೆ, ಒಳ್ಳೆಯದನ್ನು ಹೇಳಿಕೊಡುವವರು ಅಲ್ಲ, ಹೇಗೆ ಮೋಸ ಮಾಡಬೇಕು, ಹೇಗೆ ಲೂಟಿ ಹೊಡೆಯಬೇಕೆಂಬುದನ್ನು ಹೇಳಿ ಕೊಡುವವರು ಅವರೇ ಆಗಿರುತ್ತಾರೆ. ಆ ನಿಟ್ಟಿನಲ್ಲಿ ತಾವು 5 ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಕೇಂದ್ರದಲ್ಲಿರುವವರ ಬಗ್ಗೆ, ಅದು ಗ್ರಾಮ ಪಂಚಾಯತ್ ಇರಬಹುದು, ತಾಲ್ಲೂಕು ಪಂಚಾಯತ್ ಇರಬಹುದು, ಜಿಲ್ಲಾ ಪಂಚಾಯತ್‌ಗಳಿರಬಹುದು. ಈ ಬಗ್ಗೆ ಒಂದು ವಿಶೇಷವಾದಂಥ ಪ್ಲ್ಯಾನ್ ಮಾಡಿ, ಅವರನ್ನು transfer ಮಾಡುವಂಥ ಸಂದರ್ಭದಲ್ಲಿ transfer ಮಾಡಬೇಕಾದಂಥ ಅವಶ್ಯಕತೆ ಇದೆ. ನಿಜ, ಈ ಸದನದಲ್ಲಿರುವವರು, ಮೇಲ್ಮನೆಯಲ್ಲಿರುವವರು ಅವರ ಪರವಾಗಿ ಶಿಫಾರಸ್ಸುಗಳನ್ನು ಹಿಡಿದುಕೊಂಡು ಬರುವವರು. ಆದರೆ ತಾವು ಯಾವುದೇ ಮುಲಾಜಿಗೆ ಒಳಗಾಗದೇ ಅವರೆಲ್ಲರ ಬೇರು ಕದಲಿಸುವ ಕೆಲಸ ಮಾಡಿದರೆ, ಅಲ್ಲಿಂದ ಸುಧಾರಣೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಾಲ್ಲೂಕು ಪಂಚಾಯತ್‌ಗಳಲ್ಲಿ ಬಿಲ್ ಕೊಡುತ್ತಾರೆ, ಅದನ್ನು ಅಧ್ಯಕ್ಷರ ಗಮನಕ್ಕೆ ತರುವುದಿಲ್ಲ. ಆ ರೀತಿ ಅಧ್ಯಕ್ಷರ ಗಮನಕ್ಕೆ ತರದೇ ಬಿಲ್ ಕೊಟ್ಟಿದ್ದೀರೆಂದು ಪ್ರಸ್ತಾಪ ಮಾಡಿದರೂ ಕೆ.ಡಿ.ಪಿ. ಸಭೆಯಲ್ಲಿ ನಿರ್ಣಯ ಮಾಡಿದರೂ ಎಮ್ಮೆ ಇದ್ದ ಹಾಗೆ ಇದ್ದು ಬಿಡುತ್ತಾರೆ. ಅವರು "ಗೋರ್ಕಲ್ಲ ಮೇಲೆ ಮಳೆ ಹೊಯ್ದಂತೆ" ಇದ್ದು ಬಿಡುತ್ತಾರೆ. ಸಭೆಯಲ್ಲಿ ನಿರ್ಣಯ ಮಾಡಿಕೊಳ್ಳುತ್ತೀರಾ,

ಮಾಡಿಕೊಳ್ಳಿ ಎಂದು ಇದ್ದು ಬಿಡುತ್ತಾರೆ. ಹಾಗಾಗಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಯಾವುದೇ ರೀತಿಯ ನಿಯಂತ್ರಣ ಇಲ್ಲದೇ ಇರುವಂಥ ಸ್ಥಿತಿ ಇದೆ. ಹಾಗಾಗಿ ಬಿಲ್ ಕೊಡುವಂಥ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಹೇಗೆ ಅಧ್ಯಕ್ಷರ counter-sign ಇದೆಯೋ, ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರ counter-sign ಇರುವ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುದೆಂಬ ಮಾತನ್ನು ಹೇಳಬಯಸುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲೇ ಒಂದು ಪಂಚಾಯತ್‌ನಲ್ಲಿ reservationನಲ್ಲಿ ಹೇಗೆ ಮೋಸವಾಗುತ್ತದೆಂದು ಹೇಳುತ್ತೇನೆ. ಅಧ್ಯಕ್ಷ ಸ್ಥಾನಕ್ಕೆ BCM Lady ಸರದಿ ಬಂತು, ಮೊದಲನೇ ಸಾರಿ ಯಾರೂ application ಹಾಕಲಿಲ್ಲ, ಮುಂದಕ್ಕೆ ಹೋಯಿತು. ಎರಡನೇ ಸಾರಿ ಉಪಾಧ್ಯಕ್ಷರೆ ಎರಡು ಜನರಿಗೆ ನಾಮಪತ್ರವನ್ನು ಸೂಚಿಸಿದ, ಆ ಎರಡೂ ನಾಮಪತ್ರಗಳು ತಿರಸ್ಕಾರವಾದವು. ಇದು ಉದ್ದೇಶಪೂರ್ವಕವಾಗಿ ಆಗಿದೆ. ಕಳೆದ 10 ತಿಂಗಳುಗಳಿಂದ ಉಪಾಧಕ್ಷರೇ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೊಂದು ರೀತಿಯಲ್ಲಿ ಮೀಸಲಾತಿಯ ವ್ಯವಸ್ಥೆಯಲ್ಲಿ ಸರ್ಕಾರ ಚಾಪೆ ಕೆಳಗೆ ನುಸುಳಿದರೆ, ಇಂಥ ಪಟಿಂಗರು ರಂಗೋಲೆ ಕೆಳಗೆ ನುಸುಳುವ ವ್ಯವಸ್ಥೆ ಇದೆ. ಇದು ಮುಕ್ತಿಹಳ್ಳಿಯ ಗ್ರಾಮ ಪಂಚಾಯಿತಿ ಇದೆ, ಕಳೆದ ಹತ್ತು ತಿಂಗಳುಗಳಿಂದ ಉಪಾಧ್ಯಕ್ಷರೇ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾವು ವಿಶೇಷವಾಗಿ ಚಿಂತನೆ ಮಾಡುವಂಥ ಸಚಿವರಾಗಿದ್ದೀರಿ.

**ಶ್ರೀ ಹೆಚ್.ಕೆ. ಪಾಟೀಲ್:–** ತಾವು ಸಲಹೆ ಕೊಡಿ.

**ಶ್ರೀ ಸಿ.ಟಿ. ರವಿ:–** ಅದಕ್ಕೆ ಮೀಸಲಾತಿಯಿಂದ ಆಯ್ಕೆಯಾಗುವವರಿಗೆ ಅಧಿಕಾರ ತಪ್ಪಿಸುವಂಥ ಒಂದು ಸಂಚು ಆಗಿದೆ. ನಾಳೆ ಎಲ್ಲಾ ಪಂಚಾಯಿತಿಗಳಿಗೂ ಇದು ಮೇಲ್ಪಂಕ್ತಿಯಾಗಬಾರದು. ನಾಳೆ ಪಂಚಾಯಿತಿಯಲ್ಲಿ ಬಲಾಢ್ಯ ಇರುವವರು ಇದನ್ನೇ ಮೇಲ್ಪಂಕ್ತಿಯನ್ನಾಗಿ ಮಾಡಿಕೊಳ್ಳಬಾರದು. ಅದಕ್ಕೆ ಏನಾದರೂ ಒಂದು ಬದಲಿ ವ್ಯವಸ್ಥೆಯನ್ನು, ಬದಲಿ ಯೋಚನೆ ಮಾಡಬೇಕು. ತಮಗೆ ಸುಧಾರಣೆ ಹೇಗೆ ತರಬೇಕೆಂಬುದು

ಗೊತ್ತಿದೆ, ಆ ಮೀಸಲಾತಿ ಯಾರಿಗೆ ಬಂದಿರುತ್ತದೆ? ಅವರಿಗೆ ಸಿಗುವ ಹಾಗೆ ಆಗಬೇಕು. ನಾಳೆ ದಿವಸ ಎಸ್.ಸಿ. ಬಂದರೆ, ಎಸ್.ಟಿ. ಬಂದರೆ ಇದೇ ರೀತಿಯಲ್ಲಿ ಮೇಲ್ಪಂಕ್ತಿ ಮಾಡಿಕೊಂಡು ಬಿಡುತ್ತಾರೆ. ಆ ರೀತಿ ಆಗದ ರೀತಿಯಲ್ಲಿ ತುರ್ತಾಗಿ 3 ತಿಂಗಳೊಳಗೆ ಕರೆಯುವುದೋ ಅಥವಾ ಹಿರಿಯ ಆ ಕ್ಯಾಟಗರಿಯವರಿಗೆ ಸೇರಿದಂತಹವರಿಗೆ ಅಧಿಕಾರ ವಹಿಸಿಕೊಡುವುದೋ, ಏನಾದರೂ ಒಂದು ಸೂತ್ರವನ್ನು ತರಬೇಕಾಗುತ್ತದೆ. ಆ ರೀತಿ ತರದೇ ಇದ್ದರೆ, ಇದು ಒಂದು ರೀತಿಯಲ್ಲಿ ಹಿಂಬಾಗಿಲಿನಿಂದ ಅಧಿಕಾರ ಹಿಡಿಯುವಂಥ ಕೆಲಸವಾಗುತ್ತದೆ. ಆ ರೀತಿ ಆಗದ ಹಾಗೆ ನೋಡಿಕೊಳ್ಳಬೇಕು. ಇನ್ನೊಂದು ಮೀಸಲಾತಿಯಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರ ವಿಷಯದಲ್ಲಿ ಗೊಂದಲ ನಿರ್ಮಾಣವಾಯಿತು. ನಮ್ಮ ಜಿಲ್ಲೆಯಲ್ಲಿ 40 ತಿಂಗಳ ಹಿಂದೆ ಜಿಲ್ಲಾ ಪಂಚಾಯತ್‌ಗೆ ಮಹಿಳಾ ಮೀಸಲಾತಿ ಬಂದಿತ್ತು. ತಾವು ಘೋಷಣೆ ಮಾಡಬೇಕಾದರೆ ಮಹಿಳಾ ಸಾಮಾನ್ಯ ವರ್ಗಕ್ಕೆ ತಮ್ಮ ಪಟ್ಟಿಯಲ್ಲಿ ಘೋಷಣೆ ಮಾಡಿದ್ದೀರಿ. ನಾನು ಅಧಿಕಾರಿಗಳಿಗೆ 20 ತಿಂಗಳ ಅಧಿಕಾರ ಹಿಂದೆ ಸಾಮಾನ್ಯ ಮಹಿಳೆಗೆ ಇತ್ತು, ಈಗ ಮತ್ತೆ ಏಕೆ ಘೋಷಣೆ ಮಾಡಿದ್ದೀರೆಂದು ಕೇಳಿದೆ. ಆಗ ಆ ಅಧಿಕಾರಿಗಳು ನಮ್ಮ ಕೈಯಲ್ಲಿ ಏನಿದೆ, ಎಲ್ಲಾ ನಿಮಗೆ ಗೊತ್ತಿರುವುದೇ ಎಂದು ಹೇಳಿದರು. ನಾವು ಎಲ್ಲಾ ಕ್ರಮಬದ್ಧವಾಗಿ ರೋಸ್ಟರ್ ಪ್ರಕಾರ ಮಾಡಿ ಕೊಟ್ಟಿದ್ದೆವು. ಅಲ್ಲಿ ಮೇಲೆ ರಾಜಕೀಯ ಹಂತದಲ್ಲಿ ಬದಲಾಗಿದೆ ಸರ್ ಎಂದು ಹೇಳಿದರು. ನಾನು ಅವರಿಗೆ ನೀವು ಒಳ್ಳೆಯವರಿದ್ದೀರಿ, ನಿಮ್ಮನ್ನು ಈ ರೀತಿ ರಾಜಕೀಯ ಮರ್ಜಿಗೆ ತಕ್ಕಂತೆ ಮೀಸಲಾತಿಯನ್ನು ಬದಲಾಯಿಸುವ ರೀತಿಯಲ್ಲಿ ಒತ್ತಡ ತಂದವರು ಯಾರು?

**ಶ್ರೀ ಡಿ.ಎನ್. ಜೀವರಾಜ್:–** ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಈಗ ತಾಲ್ಲೂಕು ಪಂಚಾಯಿತಿಗಳಿಗೆ reservation ಕೊಟ್ಟಿದ್ದೀರಿ. ಈ ತಾಲ್ಲೂಕು ಪಂಚಾಯತ್ reservationನಲ್ಲಿ ಆಶ್ಚರ್ಯವೆಂದರೆ ಎನ್.ಆರ್. ಪುರಕ್ಕೆ ಎಸ್.ಟಿ.ಲೇಡಿ ಅಧ್ಯಕ್ಷರು, BCM ಉಪಾಧ್ಯಕ್ಷರನ್ನಾಗಿ ಕೊಟ್ಟಿದ್ದೀರಿ. ಶೃಂಗೇರಿಯಲ್ಲಿ election

ನಲ್ಲಿ ಗೆದ್ದಿರುವುದು ಎಸ್.ಟಿ.ಲೇಡಿ ಇದೆ, S.T. open ಎನ್ನುವುದು ಇಲ್ಲವೇ ಇಲ್ಲ. ಅಲ್ಲಿ S.T. open ಅನ್ನು ಅಲ್ಲಿ ಅಧ್ಯಕ್ಷರನ್ನು ಕೊಟ್ಟು, BCM ಉಪಾಧ್ಯಕ್ಷರನ್ನು ಕೊಟ್ಟಿದ್ದೀರಿ. ಅಂದರೆ ಒಂದು ವಿಧಾನಸಭಾ ಕ್ಷೇತ್ರದೊಳಗೆ ಎಸ್.ಟಿ.ಯನ್ನು ಎರಡೂ ಕಡೆಗಳಲ್ಲಿ ಅಧ್ಯಕ್ಷರನ್ನು ಶೃಂಗೇರಿಗೂ ಕೊಡುತ್ತೀರಿ, ಎನ್.ಆರ್. ಪುರಕ್ಕೂ ಎಸ್.ಟಿ. ಯವರನ್ನೇ ಅಧ್ಯಕ್ಷರನ್ನೇ ಕೊಡುತ್ತೀರಿ. ಬಿ.ಸಿ.ಎಂ.ನವರನ್ನೇ ಉಪಾಧ್ಯಕ್ಷರನ್ನು ಕೊಡುತ್ತೀರಿ, ಇದನ್ನು ಕೊಡುತ್ತಾ, ಎಲ್ಲೋ ಒಂದು ಕಡೆ ರಾಜಕೀಯ ವಾಸನೆ ಹೊಡೆಯುತ್ತದೆ. ಅವೆರಡರಲ್ಲೂ ಬಿ.ಜೆ.ಪಿ.ಯವರ ಹೆಸರು ಇಲ್ಲ.

**ಉಪಾಧ್ಯಕ್ಷರು:–** ಆಯಿತು.

**ಶ್ರೀ ಹೆಚ್.ಕೆ. ಪಾಟೀಲ್:–** ST open ಇದ್ದರೆ ಮಹಿಳೆಯರನ್ನು ಭರ್ತಿ ಮಾಡಬಹುದು.

**ಶ್ರೀ ಡಿ.ಎನ್. ಜೀವರಾಜ್:–** ಮಾಡಬಹುದು, ಆದರೆ ಎಲ್ಲೋ ಒಂದು ಕಡೆ ಎಸ್.ಟಿ.ಓಪನ್ ಇತ್ತಲ್ಲಾ, ಅವರಿಗೆ ಅನ್ಯಾಯವಾಯಿತಲ್ಲಾ, ಅಲ್ಲಿ ಒಬ್ಬರು gents ನಿಲ್ಲುವವನಿಗೆ ಅನ್ಯಾಯ ಮಾಡಿದರಲ್ಲಾ, ಅಂದರೆ ನಿಮ್ಮ ಹತ್ತಿರ ಎಸ್.ಟಿ.ಲೇಡಿ ಇಲ್ಲವೆನ್ನುವ ಕಾರಣಕ್ಕೆ ಶೃಂಗೇರಿಯಲ್ಲಿ ಎಸ್.ಟಿ.ಲೇಡಿಯನ್ನು ಕೊಡದೇ open ಕೊಟ್ಟಿದ್ದು ಎಂದು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್:–** ಎಸ್.ಟಿ.ಓಪನ್ ಇದ್ದರೆ ಮಹಿಳೆಯರು ಇರಬಹುದು.

**ಶ್ರೀ ಸಿ.ಟಿ. ರವಿ:–** ಅಧ್ಯಕ್ಷರೆ, ನಾನು ಕನ್‌ಕ್ಲೂಡ್ ಮಾಡುತ್ತೇನೆ. ಗ್ರಾಮ ಪಂಚಾಯಿತಿ ಸದಸ್ಯರಿಗೆ ಗೌರವಧನ ಕೊಟ್ಟು ಎಷ್ಟು ತಿಂಗಳಾಯಿತು? ನನಗಿರುವ ಮಾಹಿತಿ ಪ್ರಕಾರ ಅವರಿಗೆ ಗೌರವಧನ ಕೊಡದೇ ಎರಡು ವರ್ಷವಾಗುತ್ತಾ ಬಂತು. ಅವರಿಗೆ ಕೊಡುವುದು ಮೂರುಕಾಸಿನ ಗೌರವಧನ. ಆ ಗೌರವಧನವನ್ನೂ ಕೂಡ ಕಾಲಕಾಲಕ್ಕೆ ಬಿಡುಗಡೆ ಮಾಡದಿದ್ದರೆ ಹೇಗೆ? ಅಧಿಕಾರಿಗಳಿಗೆ ಪತ್ರಿ ತಿಂಗಳೂ ಸಂಬಳ ಕೊಡದಿದ್ದರೆ ಸುಮ್ಮನೇ ಬಿಡುತ್ತಾರೆಯೇ? ಅಧಿಕಾರಿಗಳಿಗೆ ಸಂಬಳ ಕೊಡುವುದು ಐದು ದಿನ

ತಡವಾದರೆ ನಮ್ಮನ್ನು, ನಿಮ್ಮನ್ನು ಕೂರುವುದಕ್ಕೂ ಬಿಡುವುದಿಲ್ಲ, ನಿಲ್ಲುವುದಕ್ಕೂ ಬಿಡುವುದಿಲ್ಲ. ನಮ್ಮ ಗೌರವಧನವನ್ನಂತೂ ನಾವು ತೆಗೆದುಕೊಳ್ಳುತ್ತೇವೆ, ಅದು ನಮ್ಮ ಖಾತೆಗೆ ಜಮಾ ಆಗುತ್ತದೆ. ಆದರೆ ಬಡಪಾಯಿಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಗೌರವಧನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡದಿದ್ದರೆ ಅದು ಸರಿಯಾಗುವುದಿಲ್ಲ. ಅವರಿಗೆ ಗೌರವಧನ ಕೊಡುವಂಥದ್ದು ಆಗಬೇಕು.

ಇನ್ನು, ಲಿಪಿಕ ನೌಕರರೆಂದು ಕೆಲಸ ಮಾಡುತ್ತಿದ್ದಾರೆ. ಅವರು 35–40 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅವರು ಕೆ.ಸಿ.ಎಸ್.ಆರ್. ನಿಯಮಗಳಡಿಯಲ್ಲೇ ಸೇವೆ ಮಾಡುತ್ತಿದ್ದಾರೆ. ಅವರಿಗೆ ಪಿಂಚಣಿ ಸೌಲಭ್ಯವಿಲ್ಲ. ಇದು ಯಾವ ನ್ಯಾಯ? ಕೆ.ಸಿ.ಎಸ್.ಆರ್. ನಿಯಮಗಳಂತೆಯೇ ಅವರಿಂದ 35–40 ವರ್ಷಗಳು ಕೆಲಸ ಮಾಡಿಸಿಕೊಂಡು ಅವರಿಗೆ ಪಿಂಚಣಿ ಕೊಡದಿದ್ದರೆ ಅದಕ್ಕಿಂತ ಅಮಾನವೀಯವಾಗಿರುವುದು ಇನ್ನೊಂದಿಲ್ಲ. ಅವರೆಲ್ಲರಿಗೂ ಪಿಂಚಣಿ ಸೌಲಭ್ಯ ಸಿಗುವಂತೆ ಆಗಬೇಕು ಎನ್ನುವ ವಿನಂತಿ ಮತ್ತು ಒತ್ತಾಯವನ್ನು ಮಾಡುತ್ತೇನೆ. ಇನ್ನೂ ಬಹಳ ಹೊತ್ತು ಮಾತನಾಡಬೇಕು ಎಂದು ಆಸೆ ಇದ್ದರೂ ಕೂಡ, ಗ್ರಾಮೀಣ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಇನ್ನಷ್ಟು ಮಾಹಿತಿಗಳಿವೆ. ಹೇಗೆ ಒಂದು ಗ್ರಾಮವನ್ನು ಸಬಲೀಕರಣ ಮಾಡುವುದು ಮತ್ತು ನಿಜವಾದ ಅರ್ಥದಲ್ಲಿ ಸ್ವಾವಲಂಬಿ ಗ್ರಾಮಗಳನ್ನು ನಿರ್ಮಾಣ ಮಾಡಿ, ರಾಷ್ಟ್ರ ಕಟ್ಟುವ ಚಿಂತನೆಯನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ ಎಂದು ಹೇಳಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:–** ಒಂದು ಪ್ರಕಟಣೆ ಇದೆ.

**ಪ್ರಕಟಣೆ**

ಮಾನ್ಯ ಅರಣ್ಯ ಸಚಿವರಾದ ಶ್ರೀ ಬಿ. ರಮಾನಾಥ ರೈರವರು ಈ ದಿನ ಮಧ್ಯಾಹ್ನ 2.00 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ ಎರಡೂ ಮುಕ್ಕಾಲು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1.42ಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2.45ಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

**(ಸದನವು ಪುನಃ ಮಧ್ಯಾಹ್ನ 2 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

**ಉಪಾಧ್ಯಕ್ಷರು:–** ಕೆ.ಎನ್. ರಾಜಣ್ಣನವರೆ, ಮಾತನಾಡಿ.

**ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):–** ಮಾನ್ಯ ಉಪಾಧ್ಯಕ್ಷರೆ, Zero Hour ನಲ್ಲಿ ಮಾನ್ಯ ಸದಸ್ಯರಾದ ಸುನೀಲ್‌ಕುಮಾರ್‌ರವರು ಶಿರಾಡಿ ಘಾಟ್ ಬಗ್ಗೆ question ಕೇಳಿದ್ದರು. ನಾನು ವಿಧಾನಪರಿಷತ್ತಿನ ಆ ಕಡೆಯ ಸಭೆಯಲ್ಲಿದ್ದೆ. ಈಗ ready ಇದೆ, ಉತ್ತರ ಕೊಡುತ್ತೇನೆ.

**ಉಪಾಧ್ಯಕ್ಷರು:–** ಕೊಡಿ.